Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೯ | ತಾರೀಕು ೨೩-೩-೧೯೫೦ನೇ ಶುಕ್ರವಾರ | ಸಂಚಿಕೆ ೪೦

ಅತ್ತೆಗೊಂದು ಕಾಲ
ಸೊಸೆಗೊಂದು ಕಾಲ

ಸ್ವರ್ಗಲೋಕದಲ್ಲಿರುವ ಅತ್ತೆಗೆ ಸೊಸೆ ಬರೆದ ಪತ್ರ.

ಸ್ವರ್ಗಲೋಕದೊಳಗಿರುವ ಅತ್ತೆಯವರಿಗೆ ನಮಸ್ಕಾರಗಳು. ಆದಾಗಿ ಉಭಯ ಕುಶಲೋಪರಿ ಸಾಂಪ್ರತ—

೪೦ ವರ್ಷದ ಹಿಂದೆ.

ನೀವು ಸ್ವರ್ಗಸ್ಥರಾಗಿ ಸುಮಾರು ನಲವತ್ತು ವರ್ಷವಾಗಿರಬಹುದು. ಈ ನಲವತ್ತು ವರ್ಷಗಳಲ್ಲಿ ಸ್ವರ್ಗ ಲೋಕದಲ್ಲಿ ಏನು ಬದಲಾವಣೆಯಾಗಿದೆಯೋ ತಿಳಿಯದು. ನೀವಾದರೂ ವರ್ಷಕ್ಕೊಂದು ಸಲವಾದರೂ ಕಾಗದ ಬರೆದರೆ ಅಲ್ಲಿನ ಯೋಗಕ್ಷೇಮಗಳು ತಿಳಿಯುವುದು. ನಿಮ್ಮ ಪರವಾಗಿ ವರ್ಷಕ್ಕೊಂದು ಸಲ ಬರುವ ಬ್ರಾಹ್ಮಣರು ಮಂತ್ರಗಳನ್ನು ಹೇಳಹೋಗುತ್ತಾರೆಯೇ ಹೊರತು ನಿಮ್ಮ ಕ್ಷೇಮಗಳನ್ನು ತಿಳಿಸುವುದಿಲ್ಲ. ನವಗಂತೂ ನಿಮ್ಮ ವಿಚಾರವು ತಿಳಿಯದೆಯೇ ಮನಸ್ಸಿಗೆ ವ್ಯಾಕುಲವಾಗಿರುತ್ತದೆ. ಅಲ್ಲಿ ಮಳೆ ಬೆಳೆ ಹೇಗಿದೆ, ರೋಗರುಜಿನಗಳು ಹೇಗಿವೆ, ಹೊಸ ಔಷಧಿಗಳನ್ನು ಕಂಡು ಹಿಡಿದಿದ್ದಾರೆಯೇ? ನಿಮ್ಮ ಡಾಕ್ಟರುಗಳು ಸೂಜಿ ಚುಚ್ಚುತ್ತಾರೆಯೇ? ವಿಟಮಿನುಗಳನ್ನು ಕಂಡುಹಿಡಿದಿದ್ದಾರೆಯೇ? ನಮ್ಮಜ್ಜಿ ಆಲೋಪೆತಿ, ಹೋಮಿಯೋಪೆತಿ, ಆಯುರ್ವೇದಿಕ್, ಯುನಾನಿ ಇವೇ ಮುಂತಾದ ವೈದ್ಯಕ್ರಮಗಳಿರುವಂತೆ ನಿಮ್ಮಲ್ಲೂ ಇವೆಯೇ?

ನಿಮ್ಮ ಕಾಲದಲ್ಲಿ ರೂಪಾಯಿಗೆ ೧೦ ಸೇರು ಅಕ್ಕಿ, ೮ ಸೇರು ಬೇಳೆ, ೨ ಆಣೆಗೆ ವೀಸೆ ಬೆಲ್ಲ, ೨ ಆಣೆಗೆ ಒಂದು ವೀಸೆ ಹುಣಸೇಹಣ್ಣು, ೪ ಆಣೆಗೆ ವೀಸೆ ಸಕ್ಕರೆ, ೫ ಆಣೆಗೆ ವೀಸೆ ಎಣ್ಣೆ, ಬೆಣ್ಣೆ ೧ರೂ. ಗೆ ೪ ವೀಸೆ ಮೆಣಸಿನಕಾಯಿಗೆ ವೀಸೆ ೧ ರೂ. ಕೊತ್ತಂಬರೀಬೀಜ ರೂ ಗೆ ೨೦ ಸೇರು, ೬ ತಾಸಿಗೊಂದು ತೆಂಗಿನ ಕಾಯಿ, ಹಾಲು ರೂ. ಗೆ ೮ ಸೇರು, ಸೌದೆ ರೂ. ಗೆ ೧೬ ಮಣ, ಸೀವೆಎಣ್ಣೆ ಒಂದು ಶೇಸೆಗೆ ಒಂದಾಣೆ ಬಾಕೀ ಸಾಮಾನುಗಳೆಲ್ಲಾ ರೂ. ಗೆ ೬ ಸೇರು, ೮ ಸೇರು ಈ ರೀತಿ ಸಿಕ್ಕುತ್ತಿತ್ತು. ಮನೆ ಬಾಡಿಗೆಯಂತೂ ಒಂದು ದೊಡ್ಡ ಮನೆಗೆ ನಾಲ್ಕು ರೂಪಾಯಿಗೇ ಹೆಚ್ಚು. ಗೋದಿಯನ್ನಂತೂ ಕೇಳುವವರೇ ಇರಲಿಲ್ಲ. ರವೆ ಉಪ್ಪಿಟ್ಟು ಮಾಡಿದ್ದನ್ನು ಚಿರೋಟಿಮಾಡಿದಂತೆ, ಒಂದು ಡಬ್ಬಿ ತುಪ್ಪಕ್ಕೆ ೮ ರೂಪಾಯಿ, ಈ ರೀತಿ ಇದ್ದಾಗ ನೀವು ೧೦ ರೂಪಾಯಿನಲ್ಲಿ ಸಂಸಾರ ನಡೆಸುತ್ತಿದ್ದೀರಿ. ಎಲ್ಲದಕ್ಕಿಂತ ಪವನಿಗೆ ೧೩-೧೫ ರೂ. ಗಳು ಇದ್ದವು. ಆ ಕಾಲವನ್ನು ಸುಖವಾಗಿ ನೀವು ಕಳೆಯುತ್ತಿದ್ದಿರಿ.

ಈಗಿನ ಕಾಲ

ಆದರೆ ಈಗ ಅಕ್ಕಿ ಕೂಗೆ ೨ ಸೇರು ಬೇಳೆ ೧ ಸೇರು, ಬೆಲ್ಲ ಸಿಕ್ಕಿದರೆ ೧೩ ಆಣೆ ಸಿಕ್ಕದಿದ್ದರೆ ೨ ರೂಪಾಯಿ, ಹುಣಸೇ ಹಣ್ಣು ಕಾಲಪಲ್ಲ ೧೫ ಆಣೆ ಸೀಸೆಗೆ, ಈಲೆ ತಪ್ಪಿದರೆ ರೂ. ೧-೮-೦ ಸಿಕ್ಕದಿದ್ದರೆ ರೂ. ೩, ಬೆಣ್ಣೆ ಸೇರಿಗೆ ೨ ರೂಪಾಯಿ, ಮೆಣಸಿನಕಾಯಿ ಸೇರಿಗೆ ೧ ರೂ. ಕೊತ್ತಂಬರೀ ಬೀಜ ರೂಪಾಯಿಗೆ ಮೂರು ಪಾವು, ತೆಂಗಿನಕಾಯಿ ರೂ. ಗೆ ೩, ಹಾಲು ರೂಪಾಯಿಗೆ ೧ ಸೇರು, ಸೌದೆ ರೂ. ೨½ ಮಣ, ಸೀವೆ ಎಣ್ಣೆ ಕಂಟ್ರೋಲ್ ಇದ್ದರೆ ೦-೩-೬ ಆಣೆ ಬಾಕಿ ಸಾಮಾನೆಲ್ಲಾ ರೂ. ಗೆ ೧ ಸೇರು ಸಿಕ್ಕುವುದೂ ದುರ್ಲಭ.

ಇವೆಲ್ಲಕ್ಕಿಂತ ಹೆಚ್ಚಾಗಿ ನಿಮ್ಮ ಕಾಲದಲ್ಲಿ ಒಬ್ಬೊಬ್ಬರೂ, ೧೨-೧೪ ಜಾಣತಿತನ ಬರೀ ಕಟ್ಟು ನಿಟ್ಟಾಗಿ ಅಂದರೆ ಮನೆ ಔಷಧಿ ಮೆಣಸಿನ ಕಾರದಿಂದ ಮಾಡುತ್ತಿದ್ದರಿ. ಈಗ ವೆಣಸು ಅನ್ನುವ ಪದಾರ್ಥ ಚಿನ್ನಕ್ಕಿಂತ ಬೆಲೆ ಹೆಚ್ಚಾಗಿದೆ. ಚಿನ್ನವಂತೂ ೭೭ ರೂ. ಕೊಟ್ಟಲ್ಲಿ ಒಂದು ಪವನು, ಬೆಳ್ಳಿ ತೊಲಕ್ಕೆ ೨ ರೂಪಾಯಿ. ಚಿನ್ನ-ಬೆಳ್ಳಿ ಕೊಳ್ಳುವ ಆಸೆಯಂತೂ ಇಲ್ಲ. ಅಂದರೆ ಮೆಣಸಿನ ಸಾರು ಮಾಡುವುದು ಕೂಡಾ ಕಷ್ಟವಾಗಿದೆ.

ನಿಮ್ಮ ಕಾಲದಲ್ಲಿ ಮದುವೆಯಾಗಿ ೩ ವರ್ಷಕ್ಕೆ ಮಕ್ಕಳಾಗದಿದ್ದರೆ ಅಶ್ವತ್ಥ ಪ್ರದಕ್ಷಿಣೆ, ನಾಗರ ಪ್ರತಿಷ್ಠೆ ಉಪವಾಸ ವೃತ ಎಲ್ಲಾ ಮಾಡುತ್ತಿದ್ದರಿ. ಈಗ ಅದಕ್ಕೆ ಬದಲಾಗಿ ಮಕ್ಕಳಾಗದಿರಲಿ ಅಂತ 'ಬರ್ತ್ ಕಂಟ್ರೋಲ್' ಅಂದರೆ ಸಂತಾನ ನಿರೋಧ ಮಾಡಬೇಕೆಂತ ಹೆಂಗಸರುಗಳೇ ಭಾಷಣ ಮಾಡುತ್ತಿದ್ದಾರೆ.

ಅಂತೂ ನೀವು ಸಂಸಾರ ಮಾಡುವ ಕಾಲದಲ್ಲಿ ಮಾನವನವರು ನಿಮ್ಮನ್ನು ಹೊಗಳುತ್ತಾ ಇದ್ದರು. ಆದರೆ ಈಗ ನಮ್ಮ ಹಣೆಯ ಬರಹ ಈಗಿನ ಕಾಲದವರಿಗೆ ಸಂಸಾರ ಮಾಡಲು ಬರುವುದಿಲ್ಲ ಅಂತ ದಿನಾ ಜಗಳ ಆಡುತ್ತಾ ಇರುತ್ತಾರೆ. ನೀವುಗಳು ೧೦ ರೂಪಾಯಿಯಲ್ಲಿ ಮಾಡುತ್ತಿದ್ದ ಸಂಸಾರ ಈಗ ರೂ. ೧೬೦ ಆದರೂ ಸಾಲದಾಗಿದೆ. ನಾವೇನು ಮಾಡುವುದು.

ರೇಷನ್ ಎಂಬ ಹೆಸರು ನಿಮಗೆ ಗೊತ್ತಿರಲಿಲ್ಲ

ರೇಷನ್ ಎಂಬುವ ಹೆಸರು ಕೂಡಾ ನಿಮಗೆ ಗೊತ್ತಿಲ್ಲದಿರಬಹುದು. ಈಗ ಇದು ಒಂದು ಮಂತ್ರ. ಇದನ್ನು ಕೊನೆಯ ಪಕ್ಷ ದಿನಕ್ಕೆ ೨೫ ಸಾರಿಯಾದರೂ ಜಪಿಸಬೇಕು. ಆ ಕಾಲದಲ್ಲಿ ಸಾಮಾನುಗಳನ್ನು ತುಂಬಿಡಲು ಉಗ್ರಾಣದಲ್ಲಿ ಕಾಲಿಡುವುದು ಕಷ್ಟವಾಗಿತ್ತು. ಈಗ ಅಲ್ಲಿ ಗಂಡ, ಹೆಂಡತಿ, ಎರಡು ಮಕ್ಕಳು ಸಂಸಾರ ಮಾಡಬಹುದು. ಸಾಮಾನುಗಳನ್ನು ತುಂಬಿಡುವ ಅಗತ್ಯವೇ ಇಲ್ಲ ಈ ಕಷ್ಟವನ್ನು ನೋಡಲಾರದೆ ಇಲಿ ಹೆಗ್ಗಣಗಳು ಊರುಗಳನ್ನೇ ಬಿಟ್ಟು ಹೋಗಿವೆ ಎಂಬ ವರ್ತಮಾನವು ಸುಳ್ಳಲ್ಲ.

ರೇಷನ್ನಿನಲ್ಲಿ ಯಾವ ಸಾಮಾನು ಬೇಕಾದರೂ ಕೊಡುತ್ತಾರೆ. ಒಬ್ಬರಿಗೆ ತಿಂಗಳಿಗೆ ೪ ಸೇರು ಅಕ್ಕಿ, ೨ಸೇರು ಗೋಧಿ ಅರ್ಧ ಪೌಂಸು ಸಕ್ಕರೆ ಸಿಗುತ್ತೆ. ಗೋದಿ ಇಲ್ಲದಿದ್ದರೆ ಜೋಳ, ರಾಗಿ, ಮುಸುಕಿನ ಜೋಳ ಇವೆಲ್ಲಾ ಕೊಡುತ್ತಾರೆ. ನಾವು ಹೊಟ್ಟೆ ತುಂಬಾ ಊಟಮಾಡಿ ಎಷ್ಟೋ ದಿನವಾಯಿತು. ಧರ್ಮವೆಂದು ಇನ್ನೊಬ್ಬರಿಗೆ ಒಂದು ಹಿಡಿ ಅನ್ನ ಕೂಡ ಹಾಕುವ ಹಾಗಿಲ್ಲ. ನಿಮ್ಮ ಕಾಲದಲ್ಲಿ ನೀವೂ ತಿಂದು, ಬೇಕಾದಷ್ಟು ಜನರಿಗೆ ಅನ್ನ ಹಾಕಿ ಅನ್ನದಾತರೆಂದು ಹೆಸರು ಪಡೆದಿದ್ದಿರಿ. ನಿಮ್ಮ ವಂಶದವರೆನಿಸಿಕೊಂಡ ನಮಗೆ ಅದರ ಗಂಧವೂ ಇಲ್ಲ. ಒಂದು ವೇಳೆ ನಾವು ತಿನ್ನುವುದರಲ್ಲಿ ವಿಮಿಸಿ ಯಾರಿಗಾದರೂ ಹಾಕಿದರೆ ಸರ್ಕಾರದ ಪ್ರಶ್ನೆಗೆ ಉತ್ತರವನ್ನು ತಯಾರಾಗಿಬೇಕಾಗುತ್ತೆ. ಅದಕ್ಕೆ ನಾವು ಎಂಜಲು ಕೈನಲ್ಲೂ ಕಾಗೆ ಓಡಿಸುವುದಿಲ್ಲ. ಎಂದು ಶಪಥ ಮಾಡಿದ್ದೇವೆ.

ಕೆಲಸ ಮತ್ತು ಆರೋಗ್ಯ

ನಿಮ್ಮ ಕಾಲದಲ್ಲಿ ತಮಾಷೆಗಾಗಿ ಕಾಲ ಕಳೆಯಲು ಕಷ್ಟವಾಗಿತ್ತೇನೋ, ಆಗಾಗ ಬಯಲು ನಾಟಕಗಳನ್ನು ಆಡುತ್ತಿದ್ದರೆಂದು ಕೇಳಿದ್ದೇವೆ. ಸಾಯಂಕಾಲವಾದರೆ ದೇವಸ್ಥಾನಕ್ಕೆ ಹೋಗುವುದು, ಪುರಾಣ ಕೇಳುವುದು, ಇವುಗಳಿದ್ದವು. ಈಗ ವಿವಿಧ ನಾಟಕಗಳು, ಸಿನಿಮಾ, ಸರ್ಕಸ್, ಸಾಮಾಜಿಕ ಚಿತ್ರಗಳು ಇವುಗಳೆಲ್ಲಾ ಬೇಕಾದಷ್ಟಿವೆ. ಹೊಟ್ಟೆಗೆ ತಿನ್ನಲು ಕೂಳಿಲ್ಲದಿದ್ದರೂ ಇವುಗಳಿಗೆಲ್ಲಾ ಯಾರೂ 'ಚಕ್ಕರ್' ಕೊಡುವುದಿಲ್ಲ.

ಆಗಿನ ಕಾಲದಲ್ಲಿ ಊರಿಂದೂರಿಗೆ ಎತ್ತಿನ ಬಂಡಿ, ಕಾಲುನಡಿಗೆ ಇದರಲ್ಲಿ ಹೋಗುತ್ತಿದ್ದರು. ಈಗ ಎಷ್ಟೇ ದೂರವಾದರೂ ಏರೋಪ್ಲೇನಿನಲ್ಲಿ ಹಕ್ಕಿಯಂತೆ ಹಾರಿಹೋಗಬಹುದು. ನೋಟಾರಿನಲ್ಲಿ ಓಡಾಡದವರೇ ಅಪರೂಪ. ಬಲುಬೇಗ ಕಾಶಿಗೆ ವಿಮಾನದಲ್ಲಿ ಹಾರಿ ತಲಪಬಹುದು.

ಆ ಕಾಲದಲ್ಲಿ ಓದಿದವರು ಅಪರೂಪ. ದಿನ ದಿನವೂ ಸ್ಕೈಸ್ಕೂಲ್, ಕಾಲೇಜುಗಳು ಹೆಚ್ಚುತ್ತಲೇ ಇವೆ. ಇಷ್ಟೆಲ್ಲಾ ಆಯಿತೆಂದರೆ ನಮಗೆ ಶಕ್ತಿ ಎನ್ನುವ ಹೆಸರೇ ಇಲ್ಲದಾಗಿದೆ.

ನೀವುಗಳು ಬತ್ತ ಕಟ್ಟಿ ಅಕ್ಕಿ ಮಾಡಿಕೊಂಡು ಹೊಳೆಯಿಂದ ನೀರು ತಂದುಕೊಂಡು ದನಕರುಗಳನ್ನೆಲ್ಲಾ ನೋಡಿಕೊಂಡು ಅಚ್ಚುಕಟ್ಟಾಗಿ ಸಂಸಾರ ಮಾಡುತ್ತಿದ್ದಿರಿ. ಈಗಿನ ನಮ್ಮ ಕಷ್ಟವನ್ನು ಏನೆಂದು ಹೇಳೋಣ, ಆಡಿಗೆ ಮಾಡಲು ಅಡಿಗೆಯವನಿಲ್ಲದಿದ್ದರೆ ಊಟಕ್ಕೇ ಕಷ್ಟ. ನಿತ್ಯಕಾಯಿಲೆ. ಬಂದ ಡಾಕ್ಟರುಗಳು ಕಾಯಿಲೆಯವರು ರೆಸ್ಟಿನಲ್ಲಿರಬೇಕೆಂದೂ ಹೆಣ್ಣು ಹಂಪಲುಗಳನ್ನು ತಿನ್ನಬೇಕೆಂದೂ ಕೆಲಸ ಮಾಡ ಕೂಡದೆಂದೂ 'ಆಡ್ವೈಸ್' ಕೊಡುತ್ತಾರೆ. ಕೈಗೆ ಅಳು ಕಾಲಿಗೆ ಅಳು ಎಂಬಂತೆ ನಮ್ಮ ಪರಿಸ್ಥಿತಿ. ಪ್ರತಿಯೊಂದಕ್ಕೂ ಯಂತ್ರಗಳು ಬೇರೆ ಬಂದಿವೆ. ಇನ್ನು ಮೇಲೆ ಅಡಿಗೆಮಾಡಿ ಬಡಿಸುವ ಯಂತ್ರಕ್ಕೆ ಆರ್ಡರ್ ಮಾಡಬೇಕೆಂದೂ ಸರಕಾರವನ್ನು ಕೇಳಿಕೊಂಡಿದ್ದೇವೆ. ಹೀಗಿರುವಾಗ ನಮಗೆ ಕಾಯಿಲೆಗಳು ಬರದೆ ಏನು ಮಾಡೀವು. ನಮ್ಮ ಕಾಯಿಲೆ ವಾಸಿಯಾಗುವ ಹಾಗೂ ಇಲ್ಲ, ಡಾಕ್ಟರುಗಳಿಗೆ ದುಡ್ಡು ಕೊಡುವುದು ತಪ್ಪುವ ಹಾಗೂ ಇಲ್ಲ. ಅದಲ್ಲದೆ ಎಷ್ಟು ಹೆಚ್ಚು ಡಾಕ್ಟರುಗಳಿಂದ ಔಷಧಿ ತೆಗೆದುಕೊಂಡರೆ ಅಷ್ಟು ದೊಡ್ಡ ಮನುಷ್ಯರೆಂದು ಜನರು ತಿಳಿದುಕೊಳ್ಳುತ್ತಾರೆ. ಹೀಗಿದೆ ನಮ್ಮ ಈಗಿನ ಕಾಲ.

'ತಾ. ನಾ.' —ಇಂತಿ ನಿಮ್ಮ ಸೊಸೆ.

ತಿಳಿಸಿರಿ.

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಅಥವ ಮನೆ ಸೈಟು ಸೂರಲಿರುವವರು ಮತ್ತು ಕೊಂಡುಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಯಲ್ಲಿ ವಿಚಾರಿಸಿರಿ. ಅಲ್ಲದೆ ಬೇಕಾದವರಿಗೆ ಕರೆಯುವ ಎಮ್ಮೆ, ಹಸು ಮತ್ತು ಉಳುವ ಎತ್ತು ಮತ್ತು ಕೋಣಗಳನ್ನೂ ಒಗ್ಗಿಸಿ ಕೊಡಲಾಗುವುದು. ಬೇಕಾದವರು ತಮಗೆ ಬೇಕಾದ ತಾರೀಕಿನ ಎಂಟು ದಿನಗಳಿಗೆ ಮುಂದೆ ತಿಳಿಸಬೇಕಾಗಿದೆ. ವಿವರಗಳಿಗೆ ಈ ಪತ್ತೆಗೆ ಬರೆಯಬಹುದು.

D. A. N. & SONS,
Commission Agent,
Gonicoppal
S. Coorg.
26-7

ಬೇಕಾಗಿದೆ.

ದೊಡ್ಡದಾಗಿ ಬೆಳೆದ ಕಾಡು ಹುಂಜಗಳ ಕುತ್ತಿಗೆಯಲ್ಲಿರುವ ಮೀನುಗುವ ಗರಿಗಳಿಂದ ಕೂಡಿದ ಭಾಗವನ್ನು ಚರ್ಮ ಸಹಿತ ತೆಗೆದು ಒಣಗಿಸಿ ಕಳುಹಿಸಿದರೆ ಪ್ರತಿಯೊಂದಕ್ಕೆ ರೂ ೧-೮-೦ ದರದಲ್ಲಿ ಕೊಂಡು ಕೊಳ್ಳಲಾಗುವದು. ಹೆಚ್ಚಿನ ವಿವರಗಳಿಗೆ ಈ ಪತ್ತೆಗೆ ಬರೆಯಿರಿ.

D. H. THANGAM & CO,
Kundah Bridge P.O.
Nilgiris

ಅಮೇರಿಕದ ಮಹಿಳೆಯರು.

(ನವಭಾರತದಿಂದ.)

ಅಮೇರಿಕದ ಮಹಿಳೆಯರ ವಿಷಯ ನಾವು ಪತ್ರಿಕೆಗಳಲ್ಲಿ ಹೆಚ್ಚು ಕೇಳಿದ್ದೇವೆ. ಅವರ ಜೀವನ ವಿಧಾನಗಳನ್ನು ಚಿತ್ರಿಸುವ ಹಲವಾರು ಚಿತ್ರಗಳನ್ನೂ ನಾವು ಕಂಡಿದ್ದೇವೆ. ಅಮೇರಿಕದ ಹೆಣ್ಣುಕ್ಕಳು ಕೇವಲ ಶೋಕು ಜೋಕುಗಳ ಆಧುನಿಕ ವ್ಯಕ್ತಿಗಳು, ಗಂಡ ಬೀರಿಗಳು ಎಂದು ಹಲವರು ಭಾವಿಸಿಕೊಂಡಿದಬಹುದು. ಅಮೇರಿಕದ ಮಹಿಳೆಯರು ಬಹಳ ಮುಂದುವರಿದವರು. ಹೌದು, ಅವರು ಸ್ವತಂತ್ರರು ಕೂಡಾ. ಆದರೆ ಅವರ ಮುಂದೆ ಹಲವಾರು ಸಮಸ್ಯೆಗಳಿವೆ ಇತರ ದೇಶಗಳ ಮಹಿಳೆಯರಂತೆ ಅವರೂ ಸಂಸಾರ ಬಂಧನ, ಮನೆ ದಾಂಪತ್ಯ ಜೀವನ ಇವುಗಳಿಗೆ ಸಿಲುಕಿರುವರು. ಅಮೇರಿಕದ ಮಹಿಳೆಯರ ವಿಷಯವಾಗಿ ಅಮೇರಿಕಾ ಸರಕಾರದ ಮಜೂರಖಾತೆಯ ಫ್ರೆಡಾ ಎಸ್ ವಿಲ್ಲರ್ ಇವರು ಬರೆದ ಲೇಖನದ ಕೆಲವು ಭಾಗಗಳನ್ನು ಇಲ್ಲಿ ಕೊಡಲಾಗಿದೆ. ಅಮೇರಿಕದ ಸ್ತ್ರೀಯ ನಿಜ ಚಿತ್ರವಿದು.

ಸ್ವತಂತ್ರ ಮಹಿಳೆಯರು

ಅಮೇರಿಕೆಯು ಕಳೆದ ೧೫೦ ವರ್ಷಗಳಿಂದ ಒಂದು ದೊಡ್ಡ ರಾಷ್ಟ್ರವಾಗಿ ಮೆರೆಯುತ್ತಿದೆ. ಅಮೇರಿಕದ ಸ್ತ್ರೀಯರು ರಾಷ್ಟ್ರದೊಡನೆ ಮುನ್ನಡೆದಿರುವರು ಸಾರ್ವಜನಿಕ ಜೀವನದಲ್ಲಿ ಅವರು ಮಾನ್ಯತೆ ಹೊಂದಿರುತ್ತಾರೆ; ಗಂಡಸರಷ್ಟೆ ಅವರೂ ಜವಾಬ್ದಾರಿಕೆ ಹೊತ್ತಿರುವರು.

ಇದೀಗ ಅಮೇರಿಕದ ಸ್ತ್ರೀಯರಲ್ಲಿ ಹೆಚ್ಚಿನವರು ಮತದಾನದ ಅಧಿಕಾರವುಳ್ಳವರಾಗಿರುವರು. ಸರಕಾರದ ಅನೇಕ ಖಾತೆಗಳಲ್ಲಿ, ಸಂಘ ಸಂಸ್ಥೆಗಳಲ್ಲಿ ಅವರು ಗಂಡಸರಷ್ಟೇ ದಕ್ಷತೆಯಿಂದ ದುಡಿಯುತ್ತಿದ್ದಾರೆ

ವಿದ್ಯಾಭ್ಯಾಸ

ಬಾಲ್ಯದಿಂದಲೂ ಅಮೇರಿಕದ ಬಾಲಕಿಯರು ತಮ್ಮ ಅಣ್ಣ ತಮ್ಮಂದಿರಂತೆ ಸ್ವತಂತ್ರರಾಗಿ ಬೆಳೆಯುತ್ತಾರೆ. ಸಾರ್ವಜನಿಕ ಶಾಲೆಗಳಲ್ಲಿ ಅಡಿಗೆ ಮಾಡುವ ಶಿಕ್ಷಣವೂ ಅವರಿಗೆ ಸಿಗುತ್ತದೆ. ಆದರೆ ಹುಡುಗಿಯರೂ ಆಡತ್ತಾರೆ. ಇದಲ್ಲದೆ ಸಾಮಾಜಿಕ ಅಧ್ಯಯನವೂ ಬಾಲಿಕೆಯರಿಗೆ ಮುಖ್ಯ ವಿಷಯವಾಗಿದೆ.

ಹೈಸ್ಕೂಲ್ ವಿದ್ಯಾಭ್ಯಾಸ ಮುಗಿದ ತರುವಾಯ ಬಾಲಕಿಯರು ಕಾಲೇಜು ವಿದ್ಯಾಭ್ಯಾಸಕ್ಕೆ ಸೇರುವಾಗ ಗಂಡು ಹೆಣ್ಣು ಎಂಬ ಭೇದವಿಲ್ಲ. ಅದರೂ ಹೆಣ್ಮಕ್ಕಳಿಗಾಗಿ ಪ್ರತ್ಯೇಕ ಕಾಲೇಜುಗಳಿವೆ. ಇಂಜಿನಿಯರಿಂಗ್, ವಿಜ್ಞಾನ, ವೈದ್ಯಕೀಯ ಮತ್ತು ಶಿಕ್ಷಣ ಅಥವಾ ಯಾವ ತರದ ಶಿಕ್ಷಣವನ್ನಾದರೂ ಅವರು ಆರಿಸಬಹುದು

ವರ್ಷ ಹೋದಂತೆ ಅಮೇರಿಕದಲ್ಲಿ ಸ್ತ್ರೀಯರು ಹೆಚ್ಚಿಚ್ಚು ಸಂಖ್ಯೆಯಲ್ಲಿ ವಿದ್ಯಾಭ್ಯಾಸ ಹೊಂದಿರುವರು ಮಾತ್ರವಲ್ಲ ಉಚ್ಚ ವಿದ್ಯಾಭ್ಯಾಸಕ್ಕೆ ಕೂಡಾ ಹೋಗುತ್ತಿರುವರು.

ಆಟ ಪಾಠಗಳು

ವಿದ್ಯಾಭ್ಯಾಸದ ಎಲ್ಲಾ ಅಂಗಗಳಲ್ಲಿ ಸ್ತ್ರೀಯರು ಪುರುಷರೊಡನೆ ಸ್ಪರ್ಧಿಸುತ್ತಿರುವರು ಆಟಗಳಲ್ಲೂ ಸ್ತ್ರೀಯರು ಪುರುಷರ ಸಮಾನರಾಗಿರುವರು; ಗುಂಡು ಹಾರಿಸುವ ಸ್ಪರ್ಧೆಗಳಲ್ಲಿ ಅನೇಕ ಭಾರಿ ಸ್ತ್ರೀಯರು ಪುರುಷರೊಡನೆ ಸ್ಪರ್ಧಿಸಿ ಜಯಿಸಿದ್ದುಂಟು. ಇಂಗ್ಲೀಷ್ ಕಾಲಿವೆಯನ್ನು ಈಜಿ ದಾಟಿದವರಲ್ಲಿ ಅಮೇರಿಕದ ಮಹಿಳೆಯೇ ಪ್ರಥಮ. ಹೆಂಗಸರ ಮತ್ತು ಪುರುಷರ ನಡುವೆ ಪಂದ್ಯಾಟಗಳು ಕೂಡಾ ನಡೆಯುವುದುಂಟು. ಕುದುರೆ ಸವಾರಿಯಲ್ಲೂ ಸ್ತ್ರೀಯರು ಗಂಡಸರನ್ನು ಸೋಲಿಸುವಷ್ಟು ಪ್ರವೀಣರಾಗಿದ್ದಾರೆ.

ಅಮೇರಿಕದ ಮಹಿಳೆಯರಲ್ಲಿ ಹೆಚ್ಚಿನವರು ಮೋಟಾರುಗಳನ್ನು ಓಡಿಸುವ ಲ್ಯಾಸೆನ್ಸ್ ಪಡೆದಿರುವರು. ೧೬ ವರ್ಷ ಪ್ರಾಯದ ಬಾಲಕಿಯರನೇಕರು ಜನನಿಬಿಡ ಮಾರ್ಗಗಳಲ್ಲಿ ಮೋಟಾರು ಓಡಿಸುವ ಚಾತುರ್ಯವನ್ನು ನೋಡಬೇಕು. ಹೈಸ್ಕೂಲುಗಳಲ್ಲಿ ಕೂಡಾ ಬಾಲಕಿಯರಿಗೆ ಮೋಟಾರು ಓಡಿಸುವ ತರಬೇತಿ ಕೊಡಲಾಗುತ್ತಿದೆ. ಪುರುಷರಿಂದ ಸ್ತ್ರೀಯರೇ ಜಾಗರೂಕತೆಯಿಂದ ಮೋಟಾರು ಓಡಿಸಬಲ್ಲರು ಎಂದು ಮೋಟಾರು ವಾಹನಗಳ ಸಂಘದವರ ಅಭಿಪ್ರಾಯವಿದೆ. ಕಳೆದ ಮಹಾಯುದ್ಧ ಕಾಲದಲ್ಲಿ ಯುದ್ಧ ರಂಗಗಳಲ್ಲಿ ಅನೇಕಾನೇಕ ಮಹಿಳೆಯರು ಮೋಟಾರು ಡ್ರೈವರುಗಳಾಗಿ ಹದ್ದಿ ನೋಡಿದ್ದರು.

ವಿವಾಹ ಮತ್ತು ಗೃಹಕೃತ್ಯ

ವಿದ್ಯಾಭ್ಯಾಸ ಮುಗಿಸಿದ ನಂತರ ಐಶ್ವರ್ಯವಂತ ಸ್ತ್ರೀಯರೂ ಅಮೇರಿಕೆಯಲ್ಲಿ ದುಡಿದು ಸಂಪಾದನೆ ಮಾಡುತ್ತಾರೆ. ವಿದ್ಯಾಭ್ಯಾಸ ಮುಗಿದ ಕೂಡಲೇ ವಿವಾಹವಾಗುವುದು ವಿರಳ.

ಸರ್ವ ಸಾಮಾನ್ಯವಾಗಿ ಅಮೇರಿಕದ ಬಾಲಕಿಯರು ೨೧ ಅಥವಾ ೨೨ ವರ್ಷ ದಾಟದೆ ವಿವಾಹವಾಗುವುದಿಲ್ಲ. ಮದುವೆಯಾಗಿ ಒಂದು ವರ್ಷದನ್ಯತರ ಸಂತಾನವಾಗುತ್ತದೆ. ಮಗಳಿಗೆ ವಿವಾಹವಾಗುವಾಗ ಮಾತೆ ಸುಮಾರು ೫೦ ವರ್ಷ ವಯಸ್ಸು ಸಂದವಳಾಗುವುದು ಅಮೇರಿಕದಲ್ಲಿ ಸರ್ವಸಾಮಾನ್ಯ ಅಮೇರಿಕದ ಸ್ತ್ರೀಯರಲ್ಲಿ ಶೇಕಡಾ ೫೦ರಷ್ಟು ವಂದಿ ವಿವಾಹಿತರು, ಶೇಕಡಾ ೧೬ರಷ್ಟು ಮಂದಿ ವಿಧವೆಯರು, ಮತ್ತು ಶೇಕಡಾ ೧೪ರಷ್ಟು ಮಂದಿ ಅವಿವಾಹಿತರಿರುವರು.

ಕೆಲವು ಯುವತಿಯರು ವಿವಾಹವಾಗುವ ತನಕ ಕೆಲಸ ಮಾಡುತ್ತಾರೆ ಅನಂತರ ಮನೆಯಲ್ಲೇ ಗೃಹಕೃತ್ಯ ನೋಡುತ್ತಾರೆ. ಆದರೆ ಉಚ್ಚ ವಿದ್ಯಾಭ್ಯಾಸ ಹೊಂದಿದವರು ಯಾವುದಾದರೊಂದು ಕೆಲಸ ಮಾಡಿಕೊಂಡು ಸಂಸಾರಿಕ ಜೀವನಕ್ಕೆ ಸಹಾಯಕವಾಗುವುದೂ ಉಂಟು.

ಅಮೇರಿಕದಲ್ಲಿ ಶೇಕಡಾ ೬೦ರಷ್ಟು ಸ್ತ್ರೀಯರು ನಗರಗಳಲ್ಲಿ ವಾಸಿಸುತ್ತಿರುವರು. ಗಂಡಸರಲ್ಲಿ ಶೇಕಡಾ ೫೬ರಷ್ಟು ಮಂದಿ ನಗರದಲ್ಲಿರುವರು.

ಮಧ್ಯಮ ವರ್ಗದ ಮನೆಗಳಲ್ಲೆಲ್ಲಾ ವಿದ್ಯುಚ್ಛಕ್ತಿಯಿಂದ ಅಡಿಗೆ ಮಾಡುವ ಉಪಕರಣ, ಟೆಲಿಫೋನ್, ರೇಡಿಯೋ ಮೊದಲಾದ ಆಧುನಿಕ ಸೌಕರ್ಯಗಳಿವೆ. ಹಳ್ಳಿಗಳಲ್ಲೂ ಇದೇ ತರದ ಸೌಕರ್ಯಗಳಿವೆ. ಹೆಚ್ಚಿನ ಗೃಹಿಣಿಯರಿಗೆ ಮನೆಕೆಲಸಕ್ಕೆ ಆಳುಗಳಿಲ್ಲ. ಮನೆಕೆಲಸ ಮಾಡುವುದಕ್ಕೆ ಜನರು ಸಿಗುವುದೂ ಕಷ್ಟ. ಏಕೆಂದರೆ ಇತರರ ಮನೆಗಳಲ್ಲಿ ದುಡಿಯುವುದರಿಂದ ಆದಾಯ ಹೆಚ್ಚು ಬರುವುದಿಲ್ಲ.

ಸಾಧಾರಣವಾಗಿ ಅಮೇರಿಕೆಯ ಮನೆಗಳಲ್ಲಿ ಗೃಹಕೃತ್ಯವನ್ನು ಸುಲಭವಾಗುವ ಆಧುನಿಕ ಯಂತ್ರೋಪಕರಣಗಳಿವೆ.

ಕಾರ್ಖಾನೆಗಳಲ್ಲಿ ಕೆಲಸ

ಅಮೇರಿಕದ ಔದ್ಯೋಗಿಕ ಕಾರ್ಖಾನೆಗಳಲ್ಲಿ ಸುಮಾರು ೫೮,೦೦೦ ಸ್ತ್ರೀಯರು ದುಡಿಯುತ್ತಿದ್ದಾರೆಂದೂ ಲೆಕ್ಕ ಹಾಕಲಾಗಿದೆ. ಗಂಡಸರು ಮಾಡುವ ಎಲ್ಲಾ ಕೆಲಸಗಳನ್ನೂ ಹೆಂಗಸರು ಮಾಡುವಷ್ಟು ಸಮರ್ಥರಿದ್ದಾರೆ.

ಅಮೇರಿಕದಲ್ಲಿ ಪತ್ರಿಕೋದ್ಯಮದಲ್ಲಿ ದುಡಿಯುವಷ್ಟು ಸ್ತ್ರೀಯರು ಇನ್ನಾವ ದೇಶದಲ್ಲೂ ಇರುವುದಿಲ್ಲ. ಬಾನ ಲಿಗಳಲ್ಲಿ ೧,೫೦೦ ಸ್ತ್ರೀಯರು ದುಡಿಯುತ್ತಿದ್ದಾರೆ.

ವಿಮಾನ ಕಾರ್ಖಾನೆಗಳಲ್ಲೂ, ವೈಮಾನಿಕ ತರಬೇತಿಯಲ್ಲೂ ಅನೇಕ ಸ್ತ್ರೀಯರು ನಿರತರಾಗಿರುತ್ತಾರೆ. ತಮ್ಮ ಖಾಸಗಿ ವಿಮಾನಗಳನ್ನು ಸ್ವತಃ ನಡೆಸುವವರೂ ಅನೇಕರಿದ್ದಾರೆ. ೧೯೪೬ರಲ್ಲಿ ೫,೧೫೪ ಸ್ತ್ರೀಯರು ವೈಮಾನಿಕ ಲ್ಯಾಸೆನ್ಸ್‌ದಾರರಾಗಿದ್ದರು.

ಯುದ್ಧ ಮತ್ತು ಸ್ತ್ರೀಯರು

ಕಳೆದ ಮಹಾಯುದ್ಧದಲ್ಲಿ ಅಮೇರಿಕದ ಸ್ತ್ರೀಯರು ಮುಖ್ಯ ಪಾತ್ರವಹಿಸಿದರು. ಸುಮಾರು ೩೦೦,೦೦೦ ಸ್ತ್ರೀಯರು ನೆಲಜಲ ವಾಯು ಪಡೆಗಳಲ್ಲಿ ಸೇರಿದ್ದರು. ಹಾಗೂ ಕರಾವಳಿ ಸಂರಕ್ಷಣಾ ಪಡೆಗಳಲ್ಲೆಲ್ಲಾ ಸಾವಿರಾರು ಮಹಿಳೆಯರು ಸೇರಿಕೊಂಡಿದ್ದರು. ಯುದ್ಧ ಕಾಲದಲ್ಲಿ ಕಾರ್ಖಾನೆಗಳಲ್ಲಿ ಸ್ತ್ರೀಯರ ಸಂಖ್ಯೆ ೪,೨೬೩,೦೦೦ ಕ್ಕೆ ಏರಿತ್ತು. ನರ್ತಕಿಯರು, ಶಾಲಾ ಬಾಲಕಿಯರೂ ಯುದ್ಧ ಸೇವೆಗೆ ಸೇರಿದ್ದರು. ಗಂಡಸರು ಹೊಲನನ್ನ ಬಿಟ್ಟು ಯುದ್ಧಕ್ಕೆ ತೆರಳಿದಾಗ ಅವರ ಪತ್ನಿಯರೂ ಮಕ್ಕಳೂ ಟ್ರಾಕ್ಟರ್ ಯಂತ್ರದಿಂದ ಗದ್ದೆ ಉಳುತ್ತಿದ್ದರು. ಮೋಟರು ಡ್ರೈವರುಗಳ ಅಭಾವ ಉಂಟಾದಾಗ ಸ್ತ್ರೀಯರು ಮುಂದೆ ಬಂದಿದ್ದರು.

ಸಾಮಾಜಿಕ ಜೀವನ

ಸಾಮಾಜಿಕ ಕಾರ್ಯಗಳಲ್ಲಿ ನಿರತರಾಗದೆ ಮನೆಯಲ್ಲಿ ಉಳಿಯುವ ಸ್ತ್ರೀಯರು ಅಮೇರಿಕದಲ್ಲಿ ಅತೀ ಕಡಿಮೆಯೆಂದು ಹೇಳಬಹುದು. ನಾಗರಿಕ ಜೀವನದ ರಹಸ್ಯ ಮಹಿಳೆಯರಿಗೆ ಚೆನ್ನಾಗಿ ತಿಳಿದಿದೆ. ರಾಜರೀಯ ಜೀವನದಲ್ಲಿ ಅವರಿಗೆ ಬಹಳ ಉತ್ಸಾಹ. ಜಾಗತಿಕ ಸಂಸ್ಥೆಗಳಲ್ಲಿ ಅವರಿಗೆ ಅಸಕ್ತಿ ಹೆಚ್ಚಿದೆ.

ಜಗತ್ತಿನ ಮುನ್ನಡೆಯಲ್ಲಿ ಗಂಡಸರೊಡನೆ ಹೆಜ್ಜೆ ಹಾಕಿಕೊಳ್ಳುತ್ತಿರುವರಲ್ಲಿ ಅಮೇರಿಕದ ಮಹಿಳೆಯರು ಅಗ್ರಗಣ್ಯರೆಂದು ಹೇಳಬಹುದು.

—ರಾ.

ಹೊಸ ವರ್ಷದ ಹೊಸ ಕೊಡುಗೆ

ನಿಮ್ಮ ಮನ ಒಪ್ಪುವ ಆಭರಣಯುತ ಸ್ವಿಸ್ ವಾಚುಗಳು

೧೯೫೧ನೇ ಇಸವಿಯ ಮೂದಲಿಯ ವಿಶೇಷ ರಿಸ್ಟ್‌ವಾಚುಗಳು. ಐದು ವರ್ಷಗಳ ಗ್ಯಾರಂಟಿಯುವು. ಎಚ್ಚರಿಕೆಯಿಂದ ಉಪಯೋಗಿಸಿದರೆ ಜೀವನ ಪರಿಯಂತರ ಬಾಳಿಕೆ ಬರುವವು. ೩೬ ಗಂಟೆಗಳಿಗೊಮ್ಮೆ ಕೀ ಕೊಡುವಂಥಾದ್ದು. ಸುಂದರವಾಗಿರುವದಲ್ಲದೆ ಸುಲಭದರದ್ದೂ ಆಗಿದೆ. ಕೆಲವೇ ವಾಚುಗಳಿವೆ. ಇವು ನಿಮ್ಮನ್ನು ಆಕರ್ಷಿಸುವವಲ್ಲದೆ ಅವುಗಳನ್ನು ಕಟ್ಟಿಕೊಳ್ಳಲು ನೀವು ಹೆಮ್ಮೆ ಪಡುವಿರಿ. ಹಳೇ ಮೋಡಲಿನ ನಿಮ್ಮ ಹಳೇ ವಾಚುಗಳನ್ನು ಬಿಟ್ಟು ಇವುಗಳನ್ನು ಕೊಳ್ಳಿರಿ. ಈ ವಾಚುಗಳು ಕೇವಲ ನಮ್ಮಲ್ಲಿ ಮಾತ್ರ ದೊರೆಯುತ್ತವೆ. ಈ ದಿನವೇ ಆರ್ಡರು ಮಾಡಿ. ಒಪ್ಪದಿದ್ದರೆ ತಕ್ಷಣ ವಾಪಾಸುಮಾಡುವ ಭರವಸೆ ಇದೆ.

10½	ಉರುಟು ಕ್ರೋಮಿಯಮ್ ಸ್ಟೀಲ್ ಬ್ಲೋಕ್	ನಂ. 233	ರೂ.	21
	,, ,,	,, ,,	366	,,	25
8¾	ಚಚ್ಚೌಕ ,,	,, ,,	455	,,	26
	,, ,,	,, ,,	477	,,	39
7¾	ಚತುರ್ಭುಜಾಕಾರ	,, ,,	599	,,	35
	,,	,, ,,	688	,,	42
5¼	ಹೆಂಗಸರದು ದುಂಡಗಿನ ಆಕಾರ	,, ,,	822	,,	44
	,,	,, ,,	944	,,	51

ಆತ್ಯುತ್ತಮ ಪಾಕೆಟ್ ವಾಚು ರೂ. 13

ರೋಲ್ಡ್ ಗೋಲ್ಡ್ ಪ್ರತಿಯೊಂದಕ್ಕೆ ,, 5/- ಹೆಚ್ಚು

The Hilson Watch Company (K. M.)
Bahadur Garh Road, Delhi 6.

4-2

ಶ್ರೀ ಕೆ. ಯಂ. ಪೊಗಪ್ಪನವರು,
"ಕೊಡಗು" ಏಜೆಂಟರು,
ಸೋಮವಾರಪೇಟೆ.

ಪ್ರಕೃತಿಯ ವೈಚಿತ್ರ್ಯಗಳು.

ಲೇ:— ಹಾರ್ವೇ ಡೇ.

ಪ್ರಕೃತಿಯು ಪರಮ ಶೇಷ್ಟಧಾತೆಯಂತೆ. ಪ್ರಕೃತಿಯ ಕೊಡುಗೈಯ ಮುಂದೆ ಅತೀ ಧನವಂತನ ಮುಕ್ತ ಹಸ್ತ ದಾನವೂ ಕೂಡ ಜಿಪುಣತನದ್ದೆನಿಸಬಹುದು. ಕ್ರಿನಿದಾದ್ ಎಂಬಲ್ಲಿಯ ಕೆರೆಯೊಂದರ ವಿಚಾರ ಎಲ್ಲರೂ ಕೇಳಿರಬಹುದು. ಪ್ರತಿ ವರ್ಷ ಆ ಕೆರೆಯಿಂದ ವಿಲಿಯೂಂತರ ಟನ್ನುಗಳಷ್ಟು ಕಲ್ಲರಗನ್ನು ಈ ಕಳೆದ ಎಂಭತ್ತು ವರ್ಷಗಳಿಂದಲೂ ತೆಗೆಯಲಾಗುತ್ತಿದೆ. ಆದರೂ ಅಲ್ಲಿ ಇನ್ನೂ ಅಮಿತ ರಾಶಿಯಲ್ಲಿ ಕಲ್ಲರಗು ತಯಾರಾಗುತ್ತಲೇ ಇದೆ. ಕೆರೆಯ ನೀರಿನ ಅಂತಸ್ಥಾಗಲೀ, ಬೇರೆ ಯಾವ ವ್ಯತ್ಯಾಸವಾಗಲೀ, ಕೊರತೆಯು ಚಿಹ್ನೆಯಾಗಲೀ ಅಲ್ಲಿ ಕಂಡು ಬರುವದಿಲ್ಲ. ಈವರೆಗೆ ಕಂಡು ಹಿಡಿದಿರುವದಿಲ್ಲ. ಬಿಡ್ಜ್‌ಎಂಡಿನ ಹತ್ತಿರದ ಎಲೆಸ್ಸಿ ಎಂಬ ಗ್ರಾಮದಲ್ಲಿಯ "ಕುಂಬಾರನ ಗದ್ದೆ" ಎಂಬ ಪ್ರದೇಶದಲ್ಲಿ ಅತ್ಯುತ್ತಮ ಮಣ್ಣಿದೆ. ಇದನ್ನು ಮಡಿಕೆಗಳನ್ನು ಮಾಡಲು ಬಹು ದೊಡ್ಡ ಪ್ರಮಾಣದಲ್ಲಿ ಪ್ರತಿದಿನ ಖರ್ಚು ಮಾಡಿದರೂ ಆ ಸ್ಥಳದಲ್ಲಿ ಯಾವದೇ ರೀತಿಯ ಹಳ್ಳವಾಗದೆ ತೆಗೆದ ಮಣ್ಣಿನ ಸ್ಥಳವು ಅಹೇ ರೀತಿಯ ಮಣ್ಣಿನಿಂದ ತುಂಬಿ ಬರುವ ದೃಶ್ಯ ಆಶ್ಚರ್ಯಕರವಾಗಿದೆ ಒಬ್ಬ ವಿಜ್ಞಾನಿಯು ಇದರ ಗುಟ್ಟೇನೆಂದು ಕಂಡು ಹಿಡಿಯಲು ಒಂದು ಕಡೆ ಎರಡಡಿ ಆಳದ ಮೂರಡಿ ವಿಸ್ತೀರ್ಣದ ಒಂದು ಹೊಂಡವನ್ನು ತೋಡಿ ಆ ಹಳ್ಳದಲ್ಲಿ ಒಂದು ಸಾಣ್ಯವನ್ನಿರಿಸಿದನು. ೨೪ ಗಂಟೆಗಳೊಳಗೆ ಹೊಂಡವು ಮೇಲೆದ್ದು ಸಾಣ್ಯವು ಹೊರ ಬಂದಿತ್ತು!

ಪ್ರಕೃತಿಯ ಈ ರೀತಿಯ ಉದಾರತೆಗೆ ಅನೇಕ ನಿದರ್ಶನಗಳನ್ನು ಕೊಡಬಹುದು. ಆಹಾರ, ಪಾನೀಯ, ಬಟ್ಟೆ ಕಡೆಗೆ ಹಣವನ್ನೂ ಕೂಡ ಮರಗಳಿಂದ ಕಯ್ದು ಉಪಯೋಗಿಸುವ ನಿದರ್ಶನಗಳಿವೆ ಪಶ್ಚಿಮ ಆಫ್ರಿಕಾದಲ್ಲಿ ಒಂದು ಗಿಡವಿದೆ. ಅವನ್ನು "ಜಿಣ್ಣೆ ಮರ" ವೆಂದು ಕರೆಯುತ್ತಾರೆ. ಆದರಿಂದ ದೊರೆಯುವ ಜಿಣ್ಣೆಯು ಅತ್ಯುತ್ತಮ ಹಸುವಿನ ತುಪ್ಪಕ್ಕೀಂತ ಉತ್ತಮವೆನಿಸಿದೆ. ಬ್ರೇಝಿಲ್‌ನಲ್ಲಿ ಈ ಜಲು ಮರಗಳಂಥಾ ಮರವೊಂದಿದೆ. ಅದ ಬೀಜವನ್ನು ಹುಡಿಮಾಡಿದರೆ ಅತ್ಯುತ್ತಮ ಕಾಫಿ ಪುಡಿಯಾಗುವದು. ಆ ಮರದ ಹಾಲು ಅತ್ಯುತ್ತಮ ಕೆನೆ ಮೊಸರಿನಂತಿರುವದು. ಅಲ್ಲಿಯ ಜನರು ಇದರ ಸಹಾಯದಿಂದ ಮಕ್ಕಳನ್ನು ಸಾಕುತ್ತಾರೆ. ಬ್ರೇಝಿಲಿನ ಗೆರ್ಗಿಪಾ ಎಂಬಲ್ಲಿ ಐವತ್ತು ಅಡಿ ಎತ್ತರ ಬೆಳೆಯುವ "ಶರ್ಟ್" ಮರಗಳಿವೆ. ಅಲ್ಲಿಯ ಜನರಿಗೆ ಆ ಮರಗಳ ತೊಗಟೆಯು ಅತ್ಯುತ್ತಮ ಬಟ್ಟೆಯಾಗಿದೆ.

ಪ್ರಕೃತಿಯು ಮನುಷ್ಯನಿಗೆ ಸಿದ್ಧವಾದ ಮೇಣದ ಬತ್ತಿಯನ್ನೂ ತಯಾರಿಸಿಟ್ಟಿದ್ದಾಳೆ. "ಕ್ಯಾಂಡಲ್ ಫಿಶ್" ಎಂಬ ವಿಷನೊಂದಿದೆ. ಇವು ಅಮೇರಿಕಾದ ಪಶ್ಚಿಮ ಕರಾವಳಿಯಲ್ಲಿ ದೊರೆಯುತ್ತವೆ. ಆದನ್ನು ಹಿಡಿದು ಅದರ ಮಧ್ಯಕ್ಕಾಗಿ ಒಂದು ಬೆಂಕಿ ಹಿಡಿಯುವ ಕಡ್ಡಿಯನ್ನು ತೂರಿ ಆದಕ್ಕೆ ಬೆಂಕಿ ಕೊಟ್ಟರೆ ಆ ವಿಷನಿನಲ್ಲಿರುವ ಎಣ್ಣೆಯ ಕಾರಣ ಪ್ರಕಾಶಮಾನವಾಗಿ ಆ ವಿಷನು ಉರಿಯುವದು. ದೀಪದ ಬದಲು ಇದನ್ನು ಉಪಯೋಗಿಸುತ್ತಾರೆ. ಮರಗಳಲ್ಲಿ ಹಣ ಬೆಳೆಯುತ್ತದೆಂದರೆ ಯಾರೂ ಆಶ್ಚರ್ಯ ಪಡಬೇಕಿಲ್ಲ. ಅನೇಕ ವೇಳೆ ಇವು ಕವಡಿಗಳ ರೂಪದಲ್ಲಿ ಸಮುದ್ರ ಕರಾವಳಿಯಲ್ಲಿ ದೊರೆಯುತ್ತವೆ. ಪಶ್ಚಿಮ ಆಫ್ರಿಕಾದಲ್ಲಿ ಇವುಗಳನ್ನು ನಾಣ್ಯಗಳಾಗಿ ಉಪಯೋಗಿಸುತ್ತಾರೆ. ಪ್ರಕೃತಿಯು ಪ್ರಯಾಣಿಕರಿಗೂ ಅತುಲ ಸಹಾಯ ಮಾಡುತ್ತಾಳೆ. ಅಮೇರಿಕಾದಲ್ಲಿ ಕೆಂಪಾಸ್ ಗಿಡವೆಂಬುದೊಂದಿದೆ. ಅದರ ಎಲೆಗಳು ಯಾವಾಗಲೂ ಉತ್ತರ ಮತ್ತು ದಕ್ಷಿಣ ದಿಕ್ಕನ್ನೇ ತೋರಿಸುವವು. ಇವು ಅನೇಕ ದಿಕ್ಕು ತಪ್ಪಿದ ಪ್ರಯಾಣಿಕರನ್ನು ರಕ್ಷಿಸುತ್ತವೆ. ಮೆಕ್ಸಿಕೊ ಮತ್ತು ದಕ್ಷಿಣ ಅಮೇರಿಕಾದ ಮರುಭೂಮಿಯಲ್ಲಿ ಒಂದು ವಿಧದ ಗಿಡವಿದೆ. ಅದನ್ನು ಕತ್ತರಿಸಿದರೆ ಅದು ಟೊಳ್ಳಾಗಿದ್ದು ಒಳಗೆ ಬಿಳಿ ಬಣ್ಣದ ಸ್ಪಂಜಿನಂಥಾ ವಸ್ತುವಿರುವದು. ಅದನ್ನು ಹಿಂಡಿದರೆ ಸೇರುಗಟ್ಟಿ ಸಿಹಿಯಾದ ನೀರು ದೊರೆಯುವದು.

ಆಲ್ಜೀರಿಯಾದಲ್ಲಿ ಎರಡು ಹೊಳೆಗಳು ಸೇರಿ ಅತ್ಯುತ್ತಮ ಬರೆಯುವ ಶಾಯಿಯನ್ನು ತಯಾರಿಸುತ್ತವೆ. ಒಂದು ಹೊಳೆಯು ಕಬ್ಬಿಣದ ಸತ್ವವಿರುವ ಪ್ರದೇಶಕ್ಕಾಗಿಯೂ ಮತ್ತೊಂದು ಟಿನಿನ್ ಸತ್ವವಿರುವ ಪ್ರದೇಶಕ್ಕಾಗಿಯೂ ಹರಿದು ಕೂಡುವವು. ಕಬ್ಬಿಣದ ಸತ್ವಹಾಗೂ ಟೇನಿನ್ ಸತ್ವಸೇರಿ ಕಪ್ಪು ವರ್ಣದ ಶಾಯಿಯು ಹೊಳೆಯಾಗುವದು. ಈ ಹೊಳೆಗಿಂಥಾ ಪ್ರಾಮುಖ್ಯವಾಗಿ ಕೊಲಂಬಿಯಾದಲ್ಲಿ ಒಂದು ಹೊಳೆ ಇದೆ. ಇದು ಜ್ವಾಲಾಮುಖಿ ಪರ್ವತ ಒಂದರ ತಪ್ಪಲಿಗಾಗಿ ಹರಿಯುವ ಕಾರಣ ಇದರ ನೀರು ಹುಳಿಯಾಗಿದ್ದು ಇದರಲ್ಲಿ ವಿಷನುಗಳು ವಾಸಿಸಲಾರವು. ಈ ಹೊಳೆಯ ನೀರು ಇತರ ಹೊಳೆಗಳ ನೀರಿನೊಡನೆ ಸೇರಿ ಅವನ್ನು ಪರಿಶುದ್ಧಗೊಳಿಸುತ್ತದೆ. ಈ ಹೊಳೆಯ ನೀರಿನಲ್ಲಿ ಹುಳಿ ಪದಾರ್ಥ ಹೆಚ್ಚಿದ್ದು ಅದಕ್ಕೆ ನಮ್ಮ ಬಟ್ಟೆ ಹಾಕಿದರೆ ಕತ್ತರಿಸಲ್ಪಡುವದು. ಮನುಷ್ಯನು ಹೆಚ್ಚು ಹೊತ್ತು ಅದರೊಳಗಿದ್ದರೆ ವ್ಯಥನಾಗುವನು.

ಮನುಷ್ಯನಿಗೆ ಬೇಕಾದ ಹಲವು ವಸ್ತುಗಳನ್ನು ಪ್ರಕೃತಿಯು ತಯಾರಿಸಿ ಸಿದ್ಧವಾಗಿಟ್ಟಿದೆ. ಉದಾಹರಣೆಗಳಿವೆ ಸ್ವೀಡನಿನ ಕಿರುನವಾರಾ ಎಂಬಲ್ಲಿ ಅಳಿಲು ಆಡಿ ಎತ್ತರದ ಬೆಟ್ಟವೊಂದಿದೆ. ಅದು ಶೇಕಡ ೭೦ ರಂತೆ ಅತ್ಯುತ್ತಮ ಕಬ್ಬಿಣದಿಂದ ಕೂಡಿದೆ. ಸಿರಿಯಾದಲ್ಲಿ ಡೆರ್ ಇಸ್ಸ್‌ಬರ್ಸ್ ಎಂಬ ೫೦೦ ಎತ್ತರದ ಬೆಟ್ಟವಿದೆ. ಅದರಲ್ಲಿ ೩,೫೦,೦೦,೦೦೦ ಟನ್ ಕಬ್ಬಿಣ ವಿದೆಯೆಂದು ಅಂದಾಜು ಮಾಡಲಾಗಿದೆ. ಬೊಲೀವಿಯಾದ ಸಿರೊ ಡಿ ಪೊಟೋಸಿ ಎಂಬಲ್ಲಿ ಬೆಳ್ಳಿಯ ಪರ್ವತವೊಂದಿದೆ. ಇದನ್ನು ೧೫೪೫ರಲ್ಲಿ ಭಾರತೀಯನೊಬ್ಬನು ಕಂಡು ಹಿಡಿದು ಇದರಿಂದ ಸ್ಪೆಯಿನಿನ ರಾಜರಿಗೆ ೩,೧೫೮,೦೦೦,೦೦೦ ಪವನು ಬೆಲೆಯ ಬೆಳ್ಳಿ ದೊರೆತಿದೆ. ಇದು ೫೦೦ ಅಡಿ ಎತ್ತರವಿದ್ದು ಇನ್ನೂ ಅಲ್ಲಿ ಬೆಳ್ಳಿ ದೊರೆಯುತ್ತಿದೆ.

ಪ್ರಕೃತಿಯಲ್ಲಿ ಕೆಲವು ಭಾಗಗಳು ಬಂಜರಾಗಿ ಕೆಲವು ಸಂಪತ್ತಿನಿಂದ ಏಕೆ ತುಂಬಿರುವವೆಂದು ಹೇಳುವದು ಕಠಿಣವಾಗಿದೆ. ಸಂಯುಕ್ತ ಅಮೇರಿಕದಲ್ಲಿ ಸುಮಾರಿನ ಕೆರೆಯೊಂದಿದೆ. ಆ ಕೆರೆಯು ನೀರು ಕದಡಲ್ಪಟ್ಟರೆ ಅದರಲ್ಲಿ ನೊರೆಯುಂಬಿ ಅಲ್ಲಿ ಸ್ನಾನಮಾಡುವವರು ಕಪ್ಪಗಿದ್ದರೆ ಕ್ರಮಶಃ ಚೆಳ್ಳಗಾಗುವರು! ಡೆಡ್ ಸಮುದ್ರದಲ್ಲಿ ಪೊಟೇಶ್ ದೊರೆಯುತ್ತದೆ. ಕೆಲವು ಮಂಜಿರೋದ ಹತ್ತಿರವಿರುವ ಮುಗಾಡಿ ಸರೋವರದಲ್ಲಿ ಸೋಡಾವು ಅತೀ ವಿಪುಲವಾಗಿ ದೊರೆಯುತ್ತದೆ. ಇಟೆಲಿಯ ಪಿಸಾ ಪ್ರಾಂತದ ಲಾಡೆರೆಲೊ ಎಂಬಲ್ಲಿ ನೈಸರ್ಗಿಕ ಬೆಳಕು ಮತ್ತು ಶಾಕ ಕೊಡುವ ಶಕ್ತಿ ಇದೆ. ಅಲ್ಲಿಯ ನಗರಕ್ಕೆ ಶಾಕ ಮತ್ತು ವಿದ್ಯುಚ್ಛಕ್ತಿ ಬೆಳಕು ಬೆಟ್ಟದ ಬದಿಯಲ್ಲಿ ಒಲೆಗಳಂತಿರುವ ಈ ಭಾಗಗಳಿಂದ ದೊರೆಯುತ್ತದೆ. ಯಾವ ಡೈನಮೋವಾಗಲೀ, ವಿದ್ಯುಚ್ಛಕ್ತಿ ಯಂತ್ರವಾಗಲೀ ಅಲ್ಲಿಲ್ಲ. ಅಲ್ಲಿಯ ಕಾರ್ಖಾನೆಗಳು ಇದರ ಶಕ್ತಿಯಿಂದ ಕೆಲಸ ಮಾಡುತ್ತವೆ. ಲಾಡೆರೆಲೋದ ನಾಗರೀಕರು ಯಾವ ಕಂದಾಯ. ಕಾಣಿಕೆ ಮೂ ಕೊಡದೆ ಬೆಳಕು ಮತ್ತು ಶಕ್ತಿಯನ್ನು ಉಪಯೋಗಿಸುತ್ತಾರೆ. ಉತ್ತರ ಅಮೇರಿಕದ ಹಲವು ನಗರಗಳು ಬೆಟ್ಟಗಳ ಒಳಗಿನ ಶಾಕದಿಂದ ವಿದ್ಯುಚ್ಛಕ್ತಿಯನ್ನು ಪಡೆಯುತ್ತವೆ ವೆಡಿಸಿನ್ ಹೋಟ್ ಎಂಬಲ್ಲಿ ಹದಿನೆಂಟು ವಾಯು ರೂಪ ಬಾವಿಗಳಿಂದ ವಿದ್ಯುತ್ ಶಕ್ತಿಯನ್ನು ಪಡೆಯುತ್ತಾರೆ.

ಜಗತ್ತಿನ ಕೆಲವು ಭಾಗಗಳಲ್ಲಿ ಪ್ರಕೃತಿಯು ಮನುಷ್ಯನಿಗೆ ಉಳಿದುಕೊಳ್ಳಲು ತಾತ್ಕಾಲಿಕ ವಸತಿಗಳನ್ನು ರಚಿಸಿದ್ದಾಳೆ. ಬೊಲಿವಿಯಾದಲ್ಲಿ ಒಂದು ಜಾತಿಯ ಜಿರಲು 'ಬಾಟ್ಲ್ ಟ್ರೀ' ಎಂಬ ಮರದ ಕಾಂಡಗಳನ್ನು ಕೊರೆದು ಮನೆಮಾಡಿಕೊಳ್ಳುತ್ತಾರೆ. ಈ ಮನೆಗಳನ್ನು ಎಂದೂ ರಿಪೇರಿ ಮಾಡುವ ಅಗತ್ಯವಿಲ್ಲ. ಮರಗಳು ಬೆಳೆದು ಯಾವ ಹಾನಿಯನ್ನೂ ಮಾಡವದಿಲ್ಲ. ಮಾನವನಿಗೆ ಈ ರೀತಿ ಪ್ರಕೃತಿಯು, ಆಹಾರ, ನೀರು, ಬಟ್ಟೆ, ಶಕ್ತಿ, ಬೆಳಕು, ದುಡ್ಡು ಮತ್ತಿತರ ಅವಶ್ಯಕ ವಸ್ತುಗಳನ್ನು ಒದಗಿಸಿ ಅದರ ಮೇಲೆ ಅತನನ್ನು ಸಂತಸದಲ್ಲಿಡಲೋ ಎಂಬಂತೆ ಮನೋರಂಜನೆಯ ಅನೇಕ ಏರ್ಪಾಡುಗಳನ್ನು ಮಾಡಿದ್ದಾಳೆ. ಪೆನ್‌ಸಿಲ್ವೇನಿಯಾದಲ್ಲಿ ಒಂದು ವಿಧವ ಕಲ್ಲುಗಳಿವೆ. ಆ ಗಂಟೆಗಳಂತೆ ಶಬ್ದ ಮಾಡುವವು. ಹೀಯಲ್ಲಿ ಮರಳಿನಲ್ಲಿ ನಡೆದಾಗ ನಾಯಿಗಳಿದಂತೆ ಶಬ್ದವಾಗುವದು. ಅಫ್ರಿಕಾದಲ್ಲಿ ಹಾಡುವ ಮರಳಿದೆ. ಡೆಸರ್‌ಟ್ ಕರಾವಳಿಯ ಮರಳನ್ನು ತೆಗೆದುಕೊಳ್ಳುವವರಿಗೆ ಉಜ್ಜಿದರೆ ಸಂಗೀತದಂತೆ ಸ್ವರ ಕೇಳುವದು. ಎಲ್ಲದಕ್ಕಿಂಥಲೂ ಆಶ್ಚರ್ಯವೆಂದರೆ ಸಿಲೋನಿನ ಹಾಡುವ ಸರೋವರ. ಪ್ರತಿ ಸಾಯಂಕಾಲ ಈ ಕೆರೆಯಿಂದ ಭಜನ ಮಂಡಳಿಯವರು ಸುಶ್ರಾವ್ಯವಾಗಿ ಹಾಡಿದಂತೆ ಶಬ್ದ ಕೇಳಿ ಬರುವದು. ಬೆಳದಿಂಗಳ ರಾತ್ರಿಯಲ್ಲಿ ಇವು ಬಹು ಜೋರಾಗಿ ಕೇಳಿಬರುವವು. ಇಂದಿನ ವರೆಗೆ ಯಾವ ವಿಜ್ಞಾನಿಯೂ ಇವರ ಕಾರಣವನ್ನು ಕಂಡು ಹಿಡಿದಿರುವದಿಲ್ಲ.

ರೂ. ೫೦,೦೦೦ ಬೆಲೆಯ ಆಭರಣಗಳು ಕೊಡಲ್ಪಡುತ್ತಿವೆ

ಡೆಲ್ಲಿಯಲ್ಲಿ ಚಿನ್ನವು ತೊಲೆಗೆ ರೂ. ೩

ಭಾರತದ ಪ್ರಾಮುಖ್ಯ ಪತ್ರಿಕೆ ಮತ್ತು ಮಾಸಿಕಗಳಲ್ಲದೆ ನಮ್ಮ ನೂರಾರು ಗ್ರಾಹಕರು ಇವನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ. ಸಂಯುಕ್ತ ಪ್ರಾಂತದ ಮಹಾಲಿಯ ಸೇತ್ ನಂದ ಕಿಶೋರ ಬಿ. ಎ. ಎಲ್. ಎಲ್. ಬಿ. ಯವರು ಹೀಗೆ ಬರೆಯುತ್ತಾರೆ. "ವಿನರ್ವ ಹೊಸ ಚಿನ್ನವನ್ನು ಆಭರಣಗಳೊಂದಿಗೆ ಕಳುಹಿಸಿರಿ. ಈ ಚಿನ್ನವು ಒರೆ ಹಚ್ಚಿದಾಗ ಅಪ್ಪಟ ಚಿನ್ನದಂತೆಯೇ ತೋರುವದಲ್ಲದೆ ಇವನ್ನು ತಂತಿಯಾಗಿ ಎಳೆಯಬಹುದು. ಕಾಗದದಂತೆ ಅಗಲವಾಗಿ ಹರಡಬಹುದು ಇದರ ವಿರುಗು ಚಿನ್ನದಂತೆಯೇ ಉಳಿಯುವದು ಇದರಿಂದ ಯಾವ ಮೂದರಿಯ ನಗಗಳನ್ನೂ ಮಾಡಿಸಬಹುದು. ಇದು ಜಗತ್ತಿನ ಹೊಸ ಶೋಧ. ಬೆಲೆ ಒಂದು ತೊಲಕ್ಕೆ ರೂ. ೩-೦-೦ ಮೂರು, ತೊಲಗಳಿಗೆ ರೂ ೮/- ಆರುತೊಲಗಳಿಗೆ ರೂ. ೧೫/- ಮತ್ತು ಹನ್ನೆರಡು ತೊಲಗಳಿಗೆ ರೂ. ೨೮/-

ಈ ಚಿನ್ನವನ್ನು ಹೀದೂಪೇಶವ ಮೂಲೆ ಮೂಲೆಗಳಲ್ಲಿ ಪ್ರಚಾರಿಸುವ ದೃಷ್ಟಿಯಿಂದ ಕಂಪೆನಿಯು ಈ ಕೆಳಗಿನ ಆಭರಣಗಳ ಬಹುಮಾನವನ್ನು ಗ್ರಾಹಕರಿಗೆ ಕೊಡಲು ನಿರ್ಧರಿಸಿದೆ. ಮೂರು ತೊಲಗಳನ್ನು ಕೊಳ್ಳುವವರಿಗೆ ನಾಲ್ಕು ಡೈಮಂಡ್ ಕಟ್ ಬಳೆಗಳೂ, ಎರಡು ಉಂಗುರಗಳು. ಆರು ತೊಲೆ ತೆಗೆದುಕೊಳ್ಳುವವರಿಗೆ ಒಂದು ನೆಕ್ಲೇಸು, ಎರಡು ಉಂಗುರಗಳು, ಒಂದು ಜೊತೆ ವಾಲೆ, ನಾಲ್ಕು ಬಳೆಗಳು ಮತ್ತು ಹಣೆಗೆ ಒಂದು ಟಿಕ್ಕವು ದೊರೆಯುವುದು. ಹಾಗೆಯೇ ೧೨ ತೊಲ ಪಡೆಕೊಳ್ಳುವವರಿಗೆ ಒಂದು ರಾಣಿ ಹಾರ್ ನೆಕ್ಲೇಸ್, ಎಟು ಬಳೆ, ಎರಡು ಉಂಗುರಗಳು, ಎರಡು ಜೊತೆವಾಲೆ, ಒಂದು ಟಿಕ್ಕು. ಈ ಆಭರಣಗಳೆಲ್ಲ ಇಮಿಟೇಶನ್ ರತ್ನಗಳಿಂದ ಕೂಡಿದವು. ತೃಪ್ತಿಯಾಗದಿದ್ದರೆ ಬೆಲೆಯನ್ನು ವಾಪಾಸು ಮಾಡುವ ಭರವಸೆ ಕೊಡಲಾಗಿದೆ. ಏಜಂಟರುಗಳಾಗಿ ತಂಗಳಿಗೆ ರೂ. ೩೦೦ ಯೂ ೫೦೦ ಸಂಪಾದಿಸಲು ಒಳ್ಳೆದಾರಿ. ಈ ಸುಸಂದರ್ಭವನ್ನು ಕಳಕೊಳ್ಳದಿರಲು ದಯವಿಟ್ಟು ಇಂದೇ ಬರೆಯಿರಿ. ಅಂಚೆ ಹಾಸಲು ಮತ್ತು ಪೇಕಿಂಗು ಮುಫತ್ತು.

Minerva New Gold ornaments House,
Bara Hindu (K. M.) Delhi 6.

4-2

ಕೊ ಡ ಗು

ತಾ. ೨೩-೩-೧೯೫೧ನೇ ಶುಕ್ರವಾರ

ಕೊಡಗಿನ ಭವಿಷ್ಯ.

ಜೋಫ್ ಕಮಿಷನರ ಪ್ರಾಂತಗಳಿಗೆ ಪ್ರಜಾಜವಾಬ್ದಾರಿ ಸರಕಾರ ಕೊಡಬೇಕೆಂಬ ತರಾವು ಈ ತಾರೀಕು ೧೬ ರಲ್ಲಿ ಕೇಂದ್ರ ಪಾರ್ಲಿಮೆಂಟಿನಲ್ಲಿ ಚರ್ಚೆಯಾದಾಗ ಗೃಹಮಂತ್ರಿಯ ಪರವಾಗಿ ಮಂತ್ರಿ ಗಾಡ್ಗಿಲ್ಲರು ಒಂದಲ್ಲ ಒಂದು ದಿನ ಕೊಡಗು ಬೇರೆ ಪ್ರಾಂತದೊಂದಿಗೆ ಸಂಯೋಜಿಸಲ್ಪಡುವದು ಎಂದು ಕೊಟ್ಟ ಹೇಳಿಕೆಯು ಕೊಡಗಿನ ಜನತೆಯನ್ನು ದಂಗುಬಡಿಸಿದೆ. ಇದಕ್ಕೆ ಕಾರಣವಾಗಿ ಪಾರ್ಲಿಮೆಂಟಿನಲ್ಲಿರುವ ಕೊಡಗಿನ ಮೆಂಬರು ಈ ಪ್ರಾಂತವನ್ನು ಕೂಡಲೆ ಮೈಸೂರು ಯೂ ಮದ್ರಾಸಿಗೆ ಸೇರಿಸಬೇಕೆಂದು ಮೂಡಿದ ಭಾಷಣವನ್ನು ಎತ್ತಿ ತೋರಿಸಿರುವರು. ಕೊಡಗಿನ ಮೆಂಬರು ಈ ಭಾಷಣದಿಂದ ತಾನು ದೇಶದ ಪ್ರತಿನಿಧಿ ಅಲ್ಲ ವೆಂಬುದನ್ನು ಸ್ಪಷ್ಟಪಡಿಸಿರುವರೆಂದರೆ ತಪ್ಪಾಗಲಾರದು. ಇವರು ರಾಜ್ಯಪುನರ್ ಸಭೆಗೆ ಆರಿಸಲ್ಪಟ್ಟಾಗ್ಯೂ ವತ್ತು ಇತ್ತೀಚೆಗೂ ಜನತೆಯು ಅಭಿಪ್ರಾಯ ತೆಗೆಯದೆ ಕೊಡಗಿನ ಭವಿಷ್ಯದ ವಿಚಾರದಲ್ಲಿ ತಾನು ಯಾವ ಸೂಚನೆಯನ್ನೂ ನೂಡುವಂತಿಲ್ಲವೆಂದೂ ಹೇಳಿದ್ದಾರೆ. ಈಗ ಸಂಯೋಜನೆಯು ಸೂಚನೆಯನ್ನು ಹೇಗೆ ಮೂಡಿದರೆಂಬುದು ಗೊತ್ತಾಗುವದಿಲ್ಲ. ಇವರು ಮೊದಲಿಂದಲೇ ಸಂಯೋಜನಾ ಪಕ್ಷಕ್ಕೆ ಸೇರಿದವರಾದ್ದರಿಂದ ಜನತೆಯ ನಿಜವಾದ ಅಭಿಪ್ರಾಯವನ್ನು ಪ್ರತಿಬಿಂಬಿಸಲಾರರೆಂದು ಅವರ ಚುನಾವಣೆ ಕಾಲದಲ್ಲೂ ಮತ್ತು ಇತ್ತೀಚೆಗೂ [illegible]ದ ಹಲವಾರು ಸಭೆಗಳಲ್ಲಿ [illegible]ಶೀಯರು ಖಚಿತ ಅಭಿಪ್ರಾಯವನ್ನು ಪ್ರಕಟಿಸಿದ್ದು ಅಸು ಇಂದು ನಿಜವಾಗಿ ಪರಿಣಮಿಸಿದೆ ಇಂಥಾ ಒಂದು ಪಕ್ಷದ ಪ್ರತಿನಿಧಿಯು ಅಭಿಪ್ರಾಯದ ಮೇಲೆ ಪ್ರಾಂತ್ಯದ ಭವಿಷ್ಯತ್ತನ್ನ ಇಂಡಿಯಾ ಸರಕಾರದವರು ನಿಶ್ಚಯಿಸುವದು ಇಲ್ಲಿಯ [illegible]ನಾಗೆ ತುಂಬಾ ಅನ್ಯಾಯ ಮೂಡಿದಂತಾಗುವದು. ಇದೂ ಅಲ್ಲದೆ ಹೊಸ ರಾ [illegible]ಘಟನೆಯಲ್ಲಿ ಯಾವುದೇ ಪ್ರದೇಶದ [illegible]ಸ್ಥಿತಿಯನ್ನು ಅಲ್ಲಿಯ ಜನರ ಅಭಿ [illegible]ಯು ತೆಗೆಯದೆ ಬದಲಾಯಿಸಲಾಗುವ [illegible]ಂದಿದೆ. ಅಂದಮೇಲೆ ಕೇಂದ್ರ ಸರ [illegible]ಳ ಮಂತ್ರಿಯವರು ಕೊಡಗಿನ ಸಂ [illegible]ಜನೆಯ ವಿಚಾರ ಇಲ್ಲಿಯ ಜನರ [illegible]ಭಿಪ್ರಾಯವನ್ನು ಕ್ರಮವಾದ ರೀತಿಯ [illegible]ಯಲ್ಲಿ ಒಂದು ತೀರ್ಮಾನವನ್ನು ಕೊಡು [illegible]ದರೆ ತಾವು ರಚಿಸಿದ ಹೊಸ ರಾಜ್ಯ ಘಟನೆಯನ್ನು ತಾವೇ ಮುರಿದಂತಾಗುವದು.

ಕೊಡಗಿನ ಭವಿಷ್ಯದ ವಿಚಾರ ಈಗ ಹಲವು ವರ್ಷಗಳಿಂದ ಇಲ್ಲಿಯ ಜನರಲ್ಲಿ ಭಿನ್ನಾಭಿಪ್ರಾಯಗಳಿದ್ದು ಜನತೆಯು ಸಾರ್ವಜನಿಕ ಸಭೆಗಳಲ್ಲೂ ವಿವಿಧ ಮೂಲಕವೂ ತನ್ನ ಅಭಿಪ್ರಾಯಗಳನ್ನು ಆಗಿಂದಾಗ್ಗೆ ಸೂಚಿಸುತ್ತಾ ಬಂದಿರುವರು. ಪ್ರತ್ಯೇಕ ಪಕ್ಷದವರು ಪ್ರಧಾನಮಂತ್ರಿಯವರಲ್ಲಿಗೆ ಕೆಲವು ಸಮಯದ ಹಿಂದೆ ನಿಯೋಗ ಗೋಷ್ಠಿ ಹೋಗಿದ್ದಾಗಯೂವ ತೀರ್ಮಾನವನ್ನಾದರೂ ಜನತೆಯ ಅಭಿಪ್ರಾಯವನ್ನು ತೆಗೆದೇ ಮಾಡುವದೆಂದು ಹೇಳಿದ್ದರು. ೧೯೪೯ರ ಅಂತ್ಯದಲ್ಲಿ ಈ ಗಂಬೀರ ಡೆಲ್ಲಿಯಲ್ಲಿ ನಡೆದ ಪ್ರತಿನಿಧಿಗಳ ಪರಿಷತ್ತಿನ ಫಲಿತಾಂಶದ ನಂತರ ಕೊಡಗಿನ ನಿವಾಸಿಗಳು ಹೆಚ್ಚೆಚ್ಚಾಗಿ ಪ್ರತ್ಯೇಕವಾದಕ್ಕೆ ಬೆಂಬಲಕೊಡುತ್ತಾ ಬಂದಿರುವರು. ಕೊಡಗಿನ ಸರಕಾರದ ಆರ್ಥಿಕ ಸ್ಥಿತಿಯು ಇತ್ತೀಚೆಗೆ ಉತ್ತಮಗೊಳ್ಳುತ್ತಾ ಬಂದಂತೆಯೇ ಸಂಯೋಜನಾವಾದಕ್ಕೆ ಶಕ್ತಿಯು ಕಡಿಮೆಯಾಗುತ್ತಾ ಬಂದಿದೆ. ಈ ದಿಸೆಯಿಂದಲೇ ಇತ್ತಲ್ಲಾಗಿ ಕೆಲವು ಸಂಯೋಜನಾವಾದಿ ಮುಂದಾಳುಗಳು ಇನ್ನು ಕೊಡಗಿನಲ್ಲಿ ಈ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿಲ್ಲವೆಂದೂ ಎಲ್ಲರೂ ಪ್ರತ್ಯೇಕತ್ವಕ್ಕೆ ಒಪ್ಪಬೇಕೆಂದೂ ಎನ್ನಲು ತೊಡಗಿರುವದಾಗಿದೆ.

ಕೆಲವು ವರ್ಷಗಳ ಹಿಂದೆ ಈ ವಿಚಾರದಲ್ಲಿ ದೇಶದಲ್ಲಿ ದೊಡ್ಡ ಗೊಂದಲವೆದ್ದಿದ್ದರೂ ಡೆಲ್ಲಿಯ ಪರಿಷತ್ತಿನ ನಂತರ ಉಭಯ ಪಕ್ಷದವರೂ ಸೇರಿ ಒಗ್ಗಟ್ಟಾಗಿ ಇಲ್ಲಿಯ ನ್ಯಾಯವಿಧಾಯಕ ಸಭೆಯಲ್ಲಿ ಕೊಡಗಿಗೆ ಜವಾಬ್ದಾರಿ ಸರಕಾರ ಕೊಡಬೇಕೆಂಬ ತರಾವನ್ನು ಪಾಸುಮಾಡಿದರು. ಇದಕ್ಕೆ ಅನುಗುಣವಾಗಿ ದೇಶದಲ್ಲೂ ಜನತೆಯು ಜವಾಬ್ದಾರಿ ಸರಕಾರವನ್ನು ಹೊಂದಿಕೊಂಡು ತಮಗೆ ಹಿತಕರವಾದ ಸರಕಾರವನ್ನು ನಡೆಸಲು ಸಿದ್ಧರಾಗುತ್ತಿದ್ದರು. ಸಂಯೋಜನೆಯ ಮೂತು ಇತ್ತಲಾಗಿ ಎತ್ತಲ್ಪಡುತ್ತಿರಲಿಲ್ಲ. ಈ ರೀತಿ ವಾತಾವರಣವು ಶಾಂತಮಯವಾಗಿ ಜನರು ಒಗ್ಗಟ್ಟಾಗಿ ವರ್ತಿಸಲು ತಯಾರಾಗುತ್ತಿದ್ದ ಸಮಯದಲ್ಲಿ ಇಂಡಿಯಾ ಸರಕಾರದ ಸಂಯೋಜನಾ ಸೂಚನೆಯು ಯಾರಿಗೆ ತಾನೇ ವಿಸ್ಮಯವನ್ನುಂಟುಮಾಡದಿರದು? ಈ ವಾರ್ತೆಯು ತಲಪಿದ ಕೂಡಲೇ ಹಲವು ಕಾನ್ಸಿಲು ಮೆಂಬರುಗಳೂ, ಜಿಲ್ಲಾ ಬೋರ್ಡು ಮೆಂಬರುಗಳೂ ಇಂಡಿಯಾ ಸರಕಾರಕ್ಕೆ ಸಂಯೋಜನಾ ಅಭಿಪ್ರಾಯವನ್ನು ವಿರೋಧಿಸಿ ತಂತಿ ಕಳುಹಿಸಿರುವದಲ್ಲದೆ ಬೇರೆ ಬೇರೆ ಕಡೆಗಳಲ್ಲಿ ಸಾರ್ವಜನಿಕ ಸಭೆಗಳು ಸೇರಿ ಜನತೆಯು ತಮ್ಮ ನಿಶೇಧನವನ್ನು ಸೂಚಿಸಲಾರಂಭಿಸಿರುವರು. ಈ ರೀತಿ ನಿಶೇಧವನ್ನು ಗ್ರಾಮ ಗ್ರಾಮಗಳಲ್ಲೂ ಮನೆಗಳಲ್ಲೂ ಸೂಚಿಸಿ ಇಂಡಿಯಾ ಸರಕಾರಕ್ಕೆ ತಿಳಿಸಬೇಕಾದುದು ಆತ್ಯವಶ್ಯವಾಗಿದೆ. ಹಿಂದೂದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ದೇಶೀಯರು ತನ್ನ ದೇಶದ ವ್ಯಕ್ತಿತ್ವಕ್ಕೆ ಮನ್ನಣೆ ಈಯುವರೆಂಬುದರಲ್ಲಿ ಸಂಶಯವಿಲ್ಲ. ಯಾವ ರೀತಿ ಹಿಂದೂದೇಶದ ಸ್ವಾತಂತ್ರ್ಯವನ್ನು ಗಳಿಸಲು ಜನತೆಯು ಕಷ್ಟನಷ್ಟಗಳನ್ನು ಸಹಿಸಿತೋ ಅದೇ ಮೇರೆ ತನ್ನ ಪ್ರಾಂತದ ಸರಕಾರವನ್ನು ತನ್ನ ಇಚ್ಛೆಯಂತೆ ನಡೆಸುವಂಥಾ ತನ್ನ ಜನ್ಮಸಿದ್ಧ ಹಕ್ಕನ್ನು ಕಾಪಾಡಲು ಕಂಕಣಬದ್ಧರಾಗುವರಾಗಿ ನಂಬುತ್ತೇವೆ.

ಭಾರತ ಭೂಮಿಗೆ ಸ್ವಾತಂತ್ರ್ಯವನ್ನು ಪಡೆದು ಪ್ರಜಾ ಜವಾಬ್ದಾರಿ ಸರಕಾರವನ್ನು ಸ್ಥಾಪಿಸಲು ಪಣತೊಟ್ಟಿರುವ ಕೇಂದ್ರದ ಕಾಂಗ್ರೆಸ್ ಸರಕಾರದವರು ಜನತೆಯ ಅಭಿಪ್ರಾಯವನ್ನು ಸೂಚಿಸಲು ತಕ್ಕ ಏರ್ಪಾಡುಮಾಡಿ ಬಹು ಮತದ ಅಭಿಪ್ರಾಯದಂತೆ ಕೊಡಗಿನ ಭವಿಷ್ಯವನ್ನು ನಿಶ್ಚಯಿಸಬೇಕಲ್ಲದೆ ಅನ್ಯಥಾ ವರ್ತಿಸಿದರೆ ದೇಶದಲ್ಲಿ ದೊಡ್ಡ ಗೊಂದಲಕ್ಕೆ ಅವಕಾಶವನ್ನು ಕಲ್ಪಿಸಿದಂತಾಗುವದರಲ್ಲಿ ಸಂಶಯವಿಲ್ಲ.

ಮುಖ್ಯೋಪಧ್ಯಾಯರ ಆಯ್ಕೆ.

ಕೊಡಗಿನಲ್ಲಿ ಐದು ಸರಕಾರಿ ಹೈಸ್ಕೂಲುಗಳಿವೆ. ಈ ಹೈಸ್ಕೂಲುಗಳ ಪೈಕಿ ಪೊನ್ನಂಪೇಟೆ ಹೈಸ್ಕೂಲಿನ ಮುಖ್ಯೋಪಧ್ಯಾಯರು ಎರಡು ತಿಂಗಳುಗಳ ಹಿಂದೆಯೇ ನಿವೃತ್ತರಾಗಿದ್ದರೂ ಈ ವರೆಗೂ ಆ ವರ ಸ್ಥಳಕ್ಕೆ ಬೇರೊಬ್ಬರ ನೇಮಕವಾಗಿರುವದಿಲ್ಲ. ಸರಕಾರದವರು ಈ ನೇಮಕದ ವಿಚಾರದಲ್ಲಿ ಈ ರೀತಿ ಅನಾವಶ್ಯಕ್ಕೆ ಯಿಂದಿರುವದೇಕೆಂದು ನಮಗೆ ತಿಳಿಯುವದಿಲ್ಲ. ಹೇಗೂ ಹೈಸ್ಕೂಲು ಮುಖ್ಯೋಪಧ್ಯಾಯರ ಆಯ್ಕೆಯ ವಿಚಾರದಲ್ಲಿ ಒಂದೆರಡು ವಿಚಾರಗಳನ್ನು ಈ ಸಂದರ್ಭದಲ್ಲಿ ಉಲ್ಲೇಖಿಸುವದು ಅವಶ್ಯವೆನಿಸಿದೆ.

ಕೊಡಗಿನಲ್ಲಿ ಈ ಮೊದಲು ಎಂಟೇ ಸರಕಾರಿ ಹೈಸ್ಕೂಲುಗಳಿದ್ದವು. ಕೆಲವು ವರ್ಷಗಳ ಹಿಂದೆ ಖಾಸಗಿಯಾಗಿ ಮೂರು ಹೈಸ್ಕೂಲುಗಳಾದಾಗ ಆ ಹೈಸ್ಕೂಲುಗಳಿಗೆ ಅಧ್ಯಾಪಕರು ದೊರೆಯದೆ ಸಾರ್ವಜನಿಕರು ಹೊದ್ದಿಗಿನಿಂದ ಅತೀ ಕಷ್ಟದಿಂದ ಅಧ್ಯಾಪಕರನ್ನು ಒದಗಿಸಿಕೊಂಡರು. ಈ ಖಾಸಗಿ ಶಾಲೆಗಳನ್ನು ಪ್ರಾರಂಭಿಸುವ ಕಾಲಕ್ಕೆ ಸ್ಥಳೀಯ ಸರಕಾರಿ ಹೈಸ್ಕೂಲಿನಲ್ಲಿದ್ದ ಕೆಲವು ಅಧ್ಯಾಪಕರು ಈ ಹೊಸ ಹೈಸ್ಕೂಲುಗಳ ಮುಖ್ಯ ಅಧ್ಯಾಪಕರಾಗಿ ಹೋಗಲು ಇಚ್ಛೆಪಟ್ಟರೂ ಆಗ ಸರಕಾರದವರು ಅವರನ್ನು ಬಿಡಲಿಲ್ಲ ಆ ಕಾರಣ ಅಂಥಾವರು ತಮ್ಮ ಹಿಂದಿನ ಉದ್ಯೋಗದಲ್ಲಿಯೇ ಇರಬೇಕಾಯಿತು.

ನಂತರ ೧೯೪೯ರಲ್ಲಿ ಈ ಖಾಸಗಿ ಹೈಸ್ಕೂಲುಗಳನ್ನು ಸರಕಾರದವರು ವಹಿಸಿಕೊಳ್ಳುವಾಗ ಆ ಶಾಲೆಗಳಲ್ಲಿ ಆ ವರೆಗೆ ಮುಖ್ಯೋಪಧ್ಯಾಯರಾಗಿ ಇದ್ದವರು ಮತ್ತು ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದವರು ಇಲಾಖೆಯಲ್ಲಿ ಯಾವ ಅಂತಸ್ಥನ್ನು ಪಡೆಯಬೇಕೆಂಬ ಬಗ್ಗೆ ಪರ್ಯಾಲೋಚನೆ ನಡೆಯಿತು. ಈ ವಿಚಾರವು ೧೯೪೯ನೇ ಮಾರ್ಚಿ ತಿಂಗಳಲ್ಲಿ ನಡೆದ ಕೌನ್ಸಿಲು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲ್ಪಟ್ಟ ಕಾಲಕ್ಕೆ ಆಗಿನ ವಿದ್ಯಾಮೆಂಬರರು ಸ್ಪಷ್ಟವಾಗಿ ಈ ರೀತಿ ಹೇಳಿದರು. 'ಖಾಸಗೀ ಹೈಸ್ಕೂಲುಗಳಾದಾಗ ಸರಕಾರಿ ಹೈಸ್ಕೂಲುಗಳಲ್ಲಿದ್ದ ಕೆಲವು ಅಧ್ಯಾಪಕರು ಆ ಹೈಸ್ಕೂಲುಗಳಿಗೆ ಹೋಗಲು ಇಷ್ಟಪಟ್ಟರೂ ಅವರು ಅವಶ್ಯಕ ಸರ್ವಿಸಿಗೆ (essential service) ಸೇರಿದವರೆಂಬ ಕಾರಣದಿಂದ ಸರಕಾರವು ಅವರನ್ನು ಹೋಗಗೊಡಲಿಲ್ಲ. ಆದ್ದರಿಂದ ಆ ಖಾಸಗಿ ಶಾಲೆಗಳನ್ನು ಇಂದು ಸರಕಾರವು ವಹಿಸಿಕೊಂಡಾಗ ಸರಕಾರಿ ಶಾಲೆಗಳಲ್ಲಿದ್ದ ಅಧ್ಯಾಪಕರ ಹಕ್ಕು ಬಾಧ್ಯತೆಗಳನ್ನು ವಿಂಗಡಿಸಿ ಖಾಸಗಿ ಶಾಲೆಯ ಅಧ್ಯಾಪಕರನ್ನು ಲೆಕ್ಕಿಸಲಾಗುವದಿಲ್ಲ. ಮೇಲಾಗಿ ಖಾಸಗಿ ಹೈಸ್ಕೂಲಿಗೆ ಅಧ್ಯಾಪಕರನ್ನು ನೇಮಿಸಿದಾಗ ಖಾಸಗಿ ಶಾಲೆಗಳಲ್ಲಿ ದೊರೆತ ವೇತನ ಮತ್ತು ಹಕ್ಕು ಬಾಧ್ಯತೆಗಳು ಅವರಿಗೆ ಸರಕಾರಿ ಇಲಾಖೆಯಲ್ಲಿ ದೊರೆಯಲಾರವೆಂದೂ, ಸರಕಾರಿ ಇಲಾಖೆಯಲ್ಲಿರುವವರ ಹಕ್ಕನ್ನು ವಿಂಗಡಿಸಲಾಗುವದಿಲ್ಲವೆಂದೂ ಮೊದಲೇ ವಿಷದಪಡಿಸಲಾಗಿತ್ತು.'

ಈ ಹೇಳಿಕೆಯ ಪ್ರಕಾರವೇ ಖಾಸಗಿ ಶಾಲೆಗಳನ್ನು ಸರಕಾರಕ್ಕೆ ತೆಗೆದುಕೊಂಡಾಗ ವರ್ತಿಸಲಾಗಿದೆ ಈ ಖಾಸಗಿ ಶಾಲೆಗಳಲ್ಲಿ ಮುಖ್ಯೋಪಧ್ಯಾಯರಾಗಿದ್ದವರು ಬೇರೆಯವರಿಗೆ ಸ್ಥಳ ತೆರವು ಮಾಡಬೇಕಾಯಿತು. ಆದರೆ ಇತ್ತಲಾಗಿ ಖಾಲಿ ಇರುವ ಮುಖ್ಯೋಪಧ್ಯಾಯರ ಸ್ಥಳಕ್ಕೆ ಪೈಪೋಟಿ ಇದೆಯೆಂದು ಕೇಳಬರುತ್ತಿದೆ. ಸರಕಾರವು-ತನ್ನ ನೀತಿಯನ್ನು ಬದಲಿಸದೆ ವರ್ತಿಸಬೇಕಾದುದು ಆತ್ಯವಶ್ಯ.

ಹೀಗೆಂದಾಗ ಕೇವಲ ಸೀನಿಯಾರಿಟಿ ಪ್ರಕಾರ ಈ ಹುದ್ದೆಯನ್ನು ಭರ್ತಿಮಾಡಬೇಕೆಂದು ನಾವು ಹೇಳುವದಿಲ್ಲ. ಒಂದು ಹೈಸ್ಕೂಲಿನ ಪ್ರಗತಿಯು ಹೆಚ್ಚಾಗಿ ಅದರ ಮುಖ್ಯೋಪಧ್ಯಾಯರನ್ನೇ ಅವಲಂಬಿಸಿರುವ ಕಾರಣ ಸರ್ವೀಸ್ಸಿಂದ ನ್ಯೂನೆ ಲೆಕ್ಕಿಸದೆ ಯೋಗ್ಯತೆಯನ್ನೂ ಪರಿಶೀಲಿಸಬೇಕು. ಇದಕ್ಕಾಗಿ ಅಧ್ಯಾಪಕರಾಗಿ ಮುಖ್ಯೋಪಧ್ಯಾಯರಾಗಲು ಅರ್ಹತೆ ಇರುವವರೆಲ್ಲರನ್ನು ಪರಿಶೀಲಿಸುವ ಏರ್ಪಾಡು ಮಾಡಬೇಕು. ಪ್ರತಿಯೊಬ್ಬನೂ ತನ್ನ ಯೋಗ್ಯತೆಯನ್ನು ಅಳೆದು ಮಾಡುವವರ ಮುಂದೆ ವ್ಯಕ್ತಮಾಡುವ ಅನುಮಾಡಬೇಕು. ಹೀಗೆ ಮಾಡುವದಾದರೆ ಯಾವ ಅಧ್ಯಾಪಕನಿಗೂ ವ್ಯಸನವಾಗಲು ಕಾರಣವಿಲ್ಲ. ಇದರಿಂದ ಶಾಲೆಗಳ ಪ್ರಗತಿಯೂ ಸಾಧಿಸಲ್ಪಟ್ಟಂತಾಗುವದು. ಇದು ಬಿಟ್ಟು ಸರ್ವೀಸಾಗಿದೆಯೆಂಬ ಒಂದು ಕಾರಣದಿಂದಾಗಲೀ, ಜನಬಳಿಕೆ ಇರುವವನೆಂದಾಗಲೀ, ಯಾರನ್ನೂ ನೇಮಿಸಬಾರದು. ದಕ್ಷತೆ ಹಾಗೂ ಸಂಘಟನಾಶಕ್ತಿಯಿದ್ದು ಶಿಸ್ತಿನಿಂದ ಸಂಸ್ಥೆಯನ್ನು ನಡೆಯಬಲ್ಲವರೇ ಮುಖ್ಯ ಉಪಾಧ್ಯಾಯರಾಗಬೇಕು. ಮುಖ್ಯೋಪಧ್ಯಾಯರನ್ನು ನೇಮಿಸುವಾಗ ಸರಕಾರವು ಈ ವಿಚಾರಗಳನ್ನು ಮನಸ್ಸಿಗೆ ತಂದುಕೊಂಡು ವರ್ತಿಸುವದಾಗಿ ಆಶಿಸುತ್ತೇವೆ.

ವರ್ತಮಾನ.

ಶ್ರೀ ಪಿ. ಜಿ. ಮುದ್ದಯ್ಯನವರನ್ನು ಕ್ರಾಪ್ ಕಾಂಪಿಟೇಶನ್ ಆಫೀಸರಾಗಿಯೂ ಶ್ರೀ ಬಿ ಎಂ. ನಾಣಯ್ಯನವರನ್ನು ಗ್ರಾಜ್ಯುವೇಟ್ ಅಸಿಟ್ಟೆಂಟಾಗಿಯೂ ಶ್ರೀ ಎ. ಎಸ್. ಗಣಪತಿಯವರನ್ನು ನಾಣಯ್ಯನವರ ಬದಲು ಎಗ್ರಿಕಲ್ಚರಲ್ ಡೆಮಾನ್ಸ್ಟ್ರೇಟರಾಗಿಯೂ ನೇಮಿಸಿರುವರು.

'ರೀಫಾರ್ಮಸ್ರ್ ಬೇಡ್ ಮಿಂಟನ್ ಕ್ಲಬ್, ಗೋಣಿಕೊಪ್ಪಲಿನಲ್ಲಿ ಬೇಡ್ ಮಿಂಟನ್ ಏವರ ಆಟದ ಪಂದ್ಯಾಟದಲ್ಲಿ ಗೋಣಿಕೊಪ್ಪಲು ರೀಫಾರ್ಮಸ್ರ್ ಕ್ಲಬಿನವರು ಕೂತು ಪರಂಬ ಟೀಮನ್ನ್ ಸೋಲಿಸಿ ಶ್ರೀ ರಾಮಯ್ಯಾಚಾರಿ ಬೆಳ್ಳಿ ಬಟ್ಟಲನ್ನು ಗೆದ್ದಿರುವರು. ಈರ್ವರ ಆಟದಲ್ಲಿ ರೀಫಾರ್ಮಸ್ರ್ ಕ್ಲಬಿನವರು ವೀರಾಜಪೇಟೆಯ ರೈಸಿಂಗ್ ಸ್ಟಾರ್ ಟೀಮನ್ನು ಸೋಲಿಸಿ ಮನೆಯಪಂಡ ಕಪ್ಪುಂಬ ಶೀಲ್ಡನ್ನು ಪಡೆದಿರುವರು.

ತಾ. ೧೩-೩-೧೯೫೧ರಲ್ಲಿ ಶ್ರೀ. ಕಂಬೀರಂಡ ತಿಮ್ಮಯ್ಯ ವೆ ನೋರಿಂಗ್ ಲ್ ಬ್ಯಾಡ್ ಮಿಂಟನ್ ಫೈನಲ್ಸ್ ಆಟವು ವೀರಾಜಪೇಟೆ ರೈಸಿಂಗ್ ಸ್ಟಾರ್ ಟೀಮಿನವರಿಗೂ ಸಿದ್ದಾಪುರದ ಬ್ಲಾಸ್ಸನವರಿಗೂ ನಡೆದು, ಸಿದ್ದಾಪುರದ ಬ್ಲಾಸ್ ಜಯಶೀಲರಾದರು. ಡಬಲ್ಸ್‌ನಲ್ಲಿ ಸಿದ್ದಾಪುರದ ವಿ ಆರ್. ಜನರಯ್ಯ ವತ್ತವರ ಜೊತೆಯವರು ಭಾಗಮಂಡ್ಲ ಬ್ರದರ್ಸ್‌ನ್ನು ಸೋಲಿಸಿದರು. ಗೆದ್ದವರಿಗೆ ವಿಸೆಸ್ ಬ್ರದರ್ಸ್‌ರವರು ಬಹುಮಾನ ವಿತರಣೆ ಮಾಡಿದರು.

ಕೊಡಗಿನಿಂದ ತಲೆ ಹೊರೆಯಿಂದ ಅಕ್ಕಿಯನ್ನು ಹೊತ್ತುಕೊಂಡು ಹೋಗುವ ಇಪ್ಪತ್ತಾರು ಜನರನ್ನ ೧೩-೩-೫೧ರಲ್ಲಿ ಮುಂಡ್ರೋಟ್ ಫಾರೆಸ್ಟ್‌ರವರಾದ ಶ್ರಿ. ತೇಲಪಂಡ ಪಳಗಪ್ಪನವರು ಮಲಬಾರಿಗೆ ಸಾಟುವ ಗಡಿಯಲ್ಲಿ ಹಿಡಿದು ಭಾಗಮಂಡ್ಲ ರೇಂಜ್ ಫಿಸರವರ ವಶಾಂತರ ಭಾಗನುಂಡಲ ಪೋಲೀಸಿಗೆ ಕೊಟ್ಟರು ವರಂತೆ.

ನಾಲ್ಕು ಫೆಲೋಶೀಪ್ ಸ್ಕಾಲರ್‌ಶಿಪನ್ನು ಇಂಡಿಯಾದ ವಿದ್ಯಾರ್ಥಿಗಳಿಗೆ ಆರು ತಿಂಗಳವಟ್ಟಿಗೆ ಕೊಡಲು ಫ್ರೆಂಚ್ ಸರಕಾರವು ಅಭಿಲಾಷೆ ಪಟ್ಟಿರುವದು. ಆರು ವಿಷಯಗಳ ಪೈಕಿ ಯಾವದಾದರೂ ನಾಲ್ಕರಲ್ಲಿ ಪರಬೇಕು ಹೊಂದಬಹುದು. ಪ್ರೆಂಚ್ ಭಾಷೆಯ ಮೂಹಿತಿ ಇರಬೇಕು. ತರ ಬೇತಿ ಫ್ರಾನ್ಸ್‌ನಲ್ಲಿ, ನಡೆಯುವದು. ಆರ್ಜಿ ಫಾರಮನ್ನು ಇಂಡಿಯಾ ಸರಕಾರದ ವಿದ್ಯಾ ಇಲಾಖೆಗೆ ಬರೆದು ತರಿಸಿಕೊಂಡು ೪-೪-೫೧ರ ಒಳಗೆ ಕೇಂದ್ರದ ವಿದ್ಯಾ ಇಲಾಖೆಗೆ ತಲಪಿಸಬೇಕು. ಹೆಚ್ಚಿನ ವಿಷಯಗಳನ್ನು ಚೀಫ್ ಕಮಿಷನರ್ ಆಫೀಸಿನಿಂದ ತಿಳಿದುಕೊಳ್ಳಬಹುದು.

ಕೊಡಗಿನ ಭವಿಷ್ಯ

(ತಾ. ೧೮-೩-೫೧ರ ಮದ್ರಾಸಿನ 'ಮೆಯಿಲ್' ಪತ್ರಿಕೆಯು ಬರೆದ ಅಗ್ರಲೇಖನವನ್ನು ವಾಚಕರಿಗಾಗಿ ಕೊಡಲಾಗಿದೆ.)

ಕೊಡಗನ್ನು ಮದ್ರಾಸು ಯೂ ಮೈಸೂರಿನೊಡನೆ ಸೇರಿಸುವ ಪ್ರಯತ್ನದಲ್ಲಿ ಕೇಂದ್ರ ಮಂತ್ರಿಮಂಡಳವು ಕೊಡಗಿನ ಚಾರಿತ್ರಿಕ ಮತ್ತು ಜಾತೀಯ ಪರಂಪರೆಯನ್ನು ಮರೆತಂತೆ ತೋರುತ್ತದೆ. ಕೊಡಗು ಚೀಫ್ ಕಮಿಷನರೊಬ್ಬರಿಂದ ಆಳಲ್ಪಡುವ ಸಂಸ್ಥಾನ ಅದಕ್ಕೂ ಅದರದೇ ಶಾಸನ ಸಭೆಯಿದೆ. ೧೯೪೮ರ ಗವರ್ನರ್ ಜನರಲರ ನಿರ್ದೇಶದಂತೆ ಮದ್ರಾಸು ಹೈಕೋರ್ಟು ಅಲ್ಲಿಯ ಹೈಕೋರ್ಟಾಗಿದೆ. ಈಚೆಯ ಶುಕ್ರವಾರ ಪಾರ್ಲಿಮೆಂಟಿನಲ್ಲಿ ಮಾತಾಡುತ್ತಾ ಕೇಂದ್ರದ ಸ್ಟೇಟ್ ಮಂತ್ರಿಯವರು ಕೊಡಗು ಇಂದಲ್ಲ ನಾಳೆ ನೆರೆಯ ಪ್ರಾಂತದೊಡನೆ ವಿಲೀನವಾಗಬೇಕೆಂದರು. ಆದರೆ ಏಕೆ ವಿಲೀನವಾಗಬೇಕೆಂಬುದಕ್ಕೆ ಅವರು ಕಾರಣ ಕೊಡಲಿಲ್ಲ. ಗೃಹಮಂತ್ರಿಯವರ ಪರ ಮಾತಾಡಿದ ಗಡ್ಗಿಲರು ವಿಲೀನೀಕರಣದ ವಿಚಾರ ಮಾತಾಡಿದರೂ ವಿವರವೇನನ್ನೂ ತಿಳಿಸಲಿಲ್ಲ. ಕೊಡಗಿನ ಮೆಂಬರೊಬ್ಬರ ಭಾಷಣವನ್ನು ಉಲ್ಲೇಖಿಸಿ ಆ ಭಾಷಣದಿಂದ ಕೊಡಗು ನೆರೆಯ ಮೈಸೂರು ಯೂ ವದಾಸಿನೊಡನೆ ಶೀಘ್ರ ಸೇರುವದು ಎಲ್ಲರಿಗೂ ಮನದಟ್ಟಾಗಿದೆಯೆಂದರು. ಈ ತೀರ್ಮಾನವು ಖಂಡಿತ ನ್ಯಾಯುವಲ್ಲ.

ಕೊಡಗಿನ ಮೆಂಬರು ಕೊಡಗು ಶಾಸನ ಸಭೆಯ ಸಲಹೆಗಳನ್ನು ಕೊಡಗಿನ ಆಡಳಿತವು ನಿರಂಕುಶತ್ವದೆಂಬ ದೂರು ಹೇಳಿರುವರೇ ವಿನಾ ಬೇರೆಲ್ಲ. ಆಯ ವಿಲೀನೀಕರಣದ ನಾವವಲ್ಲ. ಈಗಿನ ಅಲ್ಲಿಯ ಆಡಳಿತದ ಭೌಗೋಳಿಕ ಆಯವೂ ವರೀತಿಯಲೇ ಇರಲಿ, ಕೊಡಗಿನ ಭವಿಷ್ಯವನ್ನು ನಿರ್ಣಯಿಸುವ ಕಾರಣವಾಗಲಾರವು. ಕೊಡಗು ಮುತ್ತೊಂದು ಸಂಸ್ಥಾನದೊಡನೆ ವಿಲೀನವಾದರೆ ಅಲ್ಲಿಯ ಜನರ ವಿಶೆ ಅವಶ್ಯಕತೆಗಳ ಬಗ್ಗೆ ಸಂಯುಕ್ತ ಸಂಸ್ಥಾನವು ಸಾಕಷ್ಟು ಗಮನ ಕೊಡದಿರುವ ಸಾಧ್ಯತೆ ಇದೆ. ಸಂಸ್ಥಾನಗಳ ವಿಲೀನೀಕರಣದಲ್ಲಿ ಚಿಕ್ಕ ಸಂಸ್ಥಾನಗಳಿಗೆ ವಿಲೀನಗೊಂಡನಂತರ ಆಡಳಿತದಲ್ಲಿ ದೊರೆಯಬೇಕಾದ ಹಕ್ಕು ಬಾಧ್ಯತೆಗಳು ದೊರೆಯಲಾರವು. ಬೇರೆ ಹಲವು ಪ್ರಾಂತಗಳ ಮೂತಿರಲಿ, ಪುದುಕೋಟೆ, ಕೊಚ್ಚಿನ್ ಪ್ರಾಂತಗಳ ಪಾಡೂ ಹೀಗಾಗಿದೆ

ಕೊಡಗಿನ ಜನತೆ ವಿಶೇಷ ಗುಣದ ಶೌರ್ಯ ಪ್ರತಾಪಗಳಿಂದ ಕೂಡಿದ ಯುದ್ಧಕುಶಲ ಜನಾಂಗವಾಗಿದೆ. ಅವರಿಗೆ ಪ್ರತ್ಯೇಕ ಭಾಷೆ ಮತ್ತು ಮತವಿದೆ. ಅವರ ರಾಷ್ಟ್ರೀಯ ಸಂಪ್ರದಾಯ, ಖ್ಯಾತಿವೆತ್ತ ಚರಿತ್ರೆ ಹಾಗೂ ಸ್ವಾತಂತ್ರ್ಯಪ್ರೀಯತೆ ಹೆಸರಾದುದು. ಕೊಡಗು ಶತಮಾನಗಳವರೆಗೆ ತನ್ನ ಸ್ವಂತ ರಾಜರಿಂದಲೇ ಆಳಲ್ಪಡುತ್ತಿತ್ತು. ಮೈಸೂರಿನ ಹೈದರ ಆಲಿ, ಮತ್ತು ಟಿಪ್ಪು ಸುಲ್ತಾನರನ್ನು ಕೊಡಗಿನ ಜನರು ಯುದ್ಧದಲ್ಲಿ ಎದುರಿಸಿದ ಆ ಕಾರ್ಯವು ಭಾರತ ಚರಿತ್ರೆಯಲ್ಲಿ ಧೈರ್ಯ ಸಾಹಸಗಳ ಉತ್ಕೃಷ್ಟ ಉದಾಹರಣೆಯಾಗಿದೆ. ದಕ್ಷಿಣ ಹಿಂದೂಸ್ಥಾನದ ಬಹು ಭಾಗವನ್ನು ಆಕ್ರಮಿಸಿದ ಈ ಶೂರ, ಮತ್ತು ಶಕ್ತ ಧಾಳಿಗಾರರು ಕೊಡಗಿನ ಬಾಗಿಲಿಗೆ ಬಂದಾಗ ವೀರರಾಜೇಂದ್ರನು ಗ್ರೀಸ್ ಚರಿತ್ರೆಯಲ್ಲಿ ಪರ್ಶಿಯನರ ಧಾಳಿಯಾಗುವಾಗ ಥರ್ಮಪೈಲೆಯನ್ನು ರಕ್ಷಿಸಲು ಅತುಳಸಾಹಸದಿ ದ ಹೋರಾಡಿದ ಲಿಯೊನಿದಸನಂತೆ ಹೋರಾಡಿ ಕೊಡಗನ್ನು ರಕ್ಷಿಸಿದನು. ನಂತರ ದಕ್ಷಿಣ ಹಿಂದೂಸ್ಥಾನದಲ್ಲಿ ಟಿಪ್ಪುಸುಲ್ತಾನನ ವಿರುದ್ಧ ದಂಡನಾಯಕನಾಗಿ ಬಂದಿದ್ದ ಆಗಿನ ಗವರ್ನರ್ ಜನರಲ್ ಲಾರ್ಡ್ ಕಾರ್ನ್‌ವಾಲಿಸನ ಸಹಾಯದಿಂದ ಕೊಡಗು ತನ್ನ ಪ್ರತ್ಯೇಕತೆಯನ್ನು ಉಳಿಸಿಕೊಂಡಿತು. ನಂತರ ಕೊಡಗಿನಲ್ಲಿ ಆಂತರಿಕ ತೊಂದರೆಗಳು ಹೆಚ್ಚಾದ ಕಾರಣ ಅಲ್ಲಿಯ ಜನರ ಆನುಮತಿಯಂತೆ ೧೮೩೪ರಲ್ಲಿ ಕೊಡಗು ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತಕ್ಕೆ ಬಂತು. ಆ ಕಾಲಕ್ಕೆ ಕೊಡಗಿನ ಜನರ ಹಕ್ಕು ಬಾಧ್ಯತೆ, ನೀತಿ ಸಂಪ್ರದಾಯಗಳನ್ನು ಕಾದುಕೊಡಲಾಗುವದೆಂಬ ಭರವಸೆಯನ್ನು ಕಂಪೆನಿಯು ಕೊಟ್ಟಿತ್ತು. ಆ ಭರವಸೆಗಳು ಮುರಿಯಲ್ಪಟ್ಟಿಲ್ಲ. ಆ ಭರವಸೆಗಳಂತೆ ಕೇಂದ್ರ ಸರಕಾರವು ಕೊಡಗಿನ ಸ್ವಕೀಯತ್ವವನ್ನು ಉಳಿಸುವದು ಕರ್ತವ್ಯವಾಗಿದೆ.

ಸಾರ್ವಜನಿಕ ಸಭೆಗಳು.

ಹುದಿಕೇರಿ:—ತಾ. ೧೯-೩-೫೧ರಲ್ಲಿ ಹುದಿಕೇರಿಯಲ್ಲಿ ಶ್ರೀ ಅಜ್ಜಿಕಟ್ಟಿರ ಮೂದಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ನಡೆಯಿತು. ಕೊಡಗಿನ ಭವಿಷ್ಯದ ಬಗ್ಗೆ ಕೇಂದ್ರ ಶಾಸನ ಸಭೆಯಲ್ಲಿ ಸೂಚಿಸಲ್ಪಟ್ಟ ವಿವರಗಳನ್ನು ಚರ್ಚಿಸಿ ಈ ಠರಾವುಗಳನ್ನು ಮಾಡಲಾಯಿತು. (೧) ಕೊಡಗಿನ ಜನರ ಅಭಿಪ್ರಾಯ ತೆಗೆಯದೆ ಕೊಡಗನ್ನ ಮದ್ರಾಸು ಯೂ ಮೈಸೂರಿನೊಂದಿಗೆ ಸಂಯೋಜನೆ ಮಾಡುವುದಕ್ಕೆ ಕೇಂದ್ರ ಸರ್ಕಾರವು ಬಂದ ತೀರ್ಪನ್ನು ಈ ಸಭೆಯು ಪೂರಾ ವಿರೋಧಿಸುತ್ತದೆ. (೨) ಕೊಡಗನ್ನು ಪ್ರತ್ಯೇಕವಾಗಿಟ್ಟುಕೊಂಡು ಹಿಮಾಚಲ ಮತ್ತು ವಿಂದ್ಯ ಪ್ರದೇಶಗಳಿಗೆ ಕೊಡಲಿಕ್ಕೆ ನಿರ್ಧಾರ ಮಾಡಿದ ಜವಾಬ್ದಾರಿ ಸರ್ಕಾರ ಕೊಡಬೇಕೆಂದು ಈ ಸಭೆಯು ಇಂಡಿಯಾ ಸರ್ಕಾರವನ್ನು ಒತ್ತಿ ಕೇಳುತ್ತದೆ. (೩) ಕೊಡಗಿನ ಪ್ರತಿನಿಧಿ ಶ್ರೀ ಸಿ ಯ ಂ. ಪೂಣಚ್ಚನವರು ಪಾರ್ಲಿಮೆಂಟಿನಲ್ಲಿ ಕೊಡಗಿನ ಭವಿಷ್ಯದ ವಿಷಯ ಕುರಿತು ಕೊಟ್ಟ ಅಭಿಪ್ರಾಯವು ದೇಶಿಯರ ಅಭಿಪ್ರಾಯವಲ್ಲವೆಂದು ಈ ಸಭೆಯು ಅಭಿಪ್ರಾಯ ಪಡುತ್ತದೆ.

— ಈ ಠರಾವುಗಳ ನಕಲನ್ನು ಕೇಂದ್ರ ಸರಕಾರದ ಮುಖ್ಯ ಮಂತ್ರಿಗೂ ಗೃಹ ಮಂತ್ರಿಗೂ ತಿಳಿಸಲು ತೀರ್ಮಾನವಾಯಿತು.

ನಾಪೋಕ್ಲು:—ತಾ. ೧೯ರಲ್ಲಿ ಶ್ರೀ ಶಿವಚಾಳಿಯಂಡ ಸೋಮಪ್ಪನವರ ಅಧ್ಯಕ್ಷತೆಯಲ್ಲಿ ನಾಪೋಕ್ಲು ನಾಡಿನವರ ಸಾರ್ವಜನಿಕ ಸಭೆಯೊಂದು ನಡೆಯಿತು. ಮೇಲಿನ ಠರಾವುಗಳ ಅರ್ಥವ ಠರಾವುಗಳನ್ನು ಇಲ್ಲಿ ಒನ್ಮತದಿಂದ ಅಂಗೀಕರಿಸಲಾಯಿತು.

ನಾಪೋಕ್ಲು ಗ್ರಾಮಸ್ಥರ ಸಭೆಯೊಂದು ಶ್ರೀ ಬೊಪ್ಪಂಡ ದೇವಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಮೇಲ್ಕಂಡಂತೆ ಠರಾವು ಮಾಡಿದರು.

ಕಾಕೋಟುಪರಂಬು:— ತಾ. ೨೦-೩-೫೧ರಲ್ಲಿ ಶ್ರೀ ಮೂತಂಡ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ನಡೆದು ಮೇಲಿನ ಠರಾವುಗಳೇ ಇಲ್ಲಿಯೂ ಅಂಗೀಕೃತವಾದವು.

ವೀರಾಜಪೇಟೆ:—ತಾ ೨೧-೩-೫೧ರಲ್ಲಿ ವೀರಾಜಪೇಟೆಯಲ್ಲಿ ಮೆರವಣಿಗೆಯ ನಂತರ ತಾಲೂಕು ವೈದ್ಯಾನದಲ್ಲಿ ಸಾರ್ವಜನಿಕ ಸಭೆಯು ಶ್ರೀ ಕೆ. ಟಿ. ಉತ್ತಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಪಿ ಐ. ಬೆಳ್ಯಪ್ಪ, ಕೆ. ಪಿ. ಕರುಂಬಯ್ಯ, ಪಿ. ಸಿ. ಉತ್ತಯ್ಯ, ಸಿ ಎಂ. ಮೂದಪ್ಪ, ಬಿ. ಎಂ. ಸುಬ್ಬಯ್ಯ, ಪಿ. ಎ. ನಂಜಪ್ಪ, ಪುಲಿಯಂಡ ಬೋಪಯ್ಯ ಮೊದಲಾದವರು ಮಾತಾಡಿದರು. ಮೇಲಿನ ಅರ್ಥವ ಠರಾವುಗಳು ಒನ್ಮತದಿಂದ ಪಾಸಾದವು. ಅಲ್ಲದೆ ಈ ವಿಚಾರದಲ್ಲಿ ಕೇಂದ್ರ ಸರಕಾರಕ್ಕೆ ನಿಯೋಗ ಗೋಷ್ಠಿ ಹೋಗಲು ಒಂದು ಸಮಿತಿಯನ್ನು ಆರಿಸಲಾಯಿತು

ನೋಟೀಸ್.

೯-೩-೫೧ರ "ಕೊಡಗು" ಪತ್ರಿಕೆಯಲ್ಲಿ ನನ ತಮ್ಮ ಹೀರಾ ಸಿಂಗನು ಪ್ರಕಟಿಸಿದ ನೋಟೀಸಿನಲ್ಲಿ, ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಬಳಿ ಇರುವ ನನ್ನ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳು ಮತ್ತ ಸದರಿ ಆಸ್ತಿಗಳಿಗೆ ತನಗೂ ತನ್ನ ಅಣ್ಣ ಕೃಷ್ಣ ಸಿಂಗನಿಗೂ ಹಕ್ಕು ಇದೆ ಎಂದು ಇತ್ಯಾದಿ ಬರೆದಿರುತ್ತಾರೆ. ಇದು ಸತ್ಯವಲ್ಲ. ಸದ್ರಿ ಆಸ್ತಿಗಳನ್ನು ತನ್ನ ಸ್ವಂತ ಸಂಪಾದನೆಯ ಹಣದಿಂದ ೧೯೧೧-೧೨ರಲ್ಲಿ ಕೊಂಡು ಕೊಂಡು ಆ ಆಲಾಗಾಯ್ತಿನಿಂದ ನನ್ನ ಸ್ವಂತ ಹಕ್ಕಿನಿಂದ ಅನುಭವಿಸಿಕೊಂಡು ಬರುತ್ತಿದ್ದೇನೆ. ಸದ್ರಿ ಆಸ್ತಿಗಳಿಗೆ ಸದ್ರಿ ಹೀರಾ ಸಿಂಗನಿಗಾಗಲೀ ಕೃಷ್ಣ ಸಿಂಗನಿಗಾಗಲೀ ಯಾವ ಹಕ್ಕೂ ಇರುವುದಿಲ್ಲ. ಸದಿ ಆಸ್ತಿಗಳನ್ನು ಮೂರಾಟ ಮಾಡುವ ನುತ್ತು ಇತರ ರೀತಿ ವಿಲೆ ಮಾಡುವ ಸಂಪೂರ್ಣ ಹಕ್ಕು ನನಗಿದೆ ಎಂದು ಈ ಮೂಲಕ ಸಮಸ್ತ ಜನರಿಗೂ ಶತ ಪಡಿಸಿರುತ್ತೇನೆ. ಪಿ. ಚೋಟೆ ಸಿಂಗ್ ಮಡಿಕೇರಿ, ತಾ. ೨೦-೩-೫೧

ವಿನಂತಿ.

ವೀರರಾಜಪೇಟೆಯಲ್ಲಿ ಶ್ರೀ. ಜೈದನ್ಮ ಮುತ್ತಪ್ಪದೇವರ ವಠಾರದ ಆಲೆಕಂಡಿ ಜಾತಿವಿನ ವಿನಂತಿ:—

ತಾರೀಕು 1-9-50 ರ 'ಕೊಡಗು' ಪತ್ರಿಕೆಯಲ್ಲಿ ಪರಸನಕಡು ವಡಪುರ ಮೇನೇಜರ್ ಕಂಜಾರಾಮನೆಂಬವರ ವಿನಂತಿ ನೋಡಿದಲ್ಲಿ, ಕೊಡಗು ದೇಶದ ಹಲವು ಕಡೆಯಲ್ಲಿ ದೇವಸ್ಥಾನಗಳನ್ನು ಏರ್ಪಡಿಸಿ ನಡಿಯುವ ಉತ್ಸವಗಳಿಗೆ ಹೋಗಕೂಡದಾಗಿ ಹರಿಕ್ಕೆ ಪ್ರಾರ್ಥನೆಗಳನ್ನು ಕಳುಹಿಸಬಾರದಾಗಿ ಕೇಳಿರಿ ಕೊಡಕೂಡದ್ದಾಗಿಯೂ ಪರಸನಕಡು ಮುತ್ತಪ್ಪದೇವರ ಆದಿ ಸ್ಥಳ ಆಲ್ಲಿಂದ ಹುಕುಂ ಪಡೆದಿಲ್ಲವೆಂತಲೂ ಪ್ರಕಟಿಸಿದ್ದು ನೋಡಿದಲ್ಲಿ ಅವರ ಸಂಕೋಚದ ಮುತ್ತ ತಪ್ಪು ಅಭಿಪ್ರಾಯವನ್ನು ಜನರಲ್ಲಿ ಬೀರಿ ಅಲ್ಲಿಗೆ ಎಲ್ಲರ ಮನಸ್ಸನ್ನು ಸೆಳೆಯಿಸಿಕೊಡಗಿನವರು ಮಾತ್ರ ದೇವರ ಹೆಸರಿನಿಂದ ಜೀವನ ಕಳೆಯುವಾರೆ ಅವರು ಮಾತ್ರ ಅಲ್ಲವೆಂತ ವ್ಯಕ್ತಪಡಿಸಿ ಅಲ್ಲಿಯ ವೃದ್ಧಿಯ ಆತಿ ಆಸೆ ಇಡಿಗಿದ ಉದ್ದೇಶದ ಮಾತಲ್ಲದೆ ಅನ್ಯಥ ಅಲ್ಲ ವೆಂದುಹೇಳತ್ತೇನೆ ದೇವರು ಲೋಕದಲ್ಲಿ ಒಬ್ಬನೆ. ಸರ್ವವ್ಯಾಪಕನು ಸರ್ವಸ್ವಾಮಿ ದೇವರಿಲ್ಲದ ಸ್ಥಳ ಇಲ್ಲ ಎಂದ ಬಳಿಕ ದೇವರ ಭಕ್ತರು ಲೋಕದ ಎಲ್ಲಾ ಸ್ಥಳಗಳಲ್ಲಿರತ್ತಾರೆ. ಆ ಭಕ್ತರು ಅವರ ಅವರ ಪ್ರಾರ್ಥನೆ ಸಲಾಯಿಸಲಿಕ್ಕಾಗಿ ಒಂದೊಂದು ಸ್ಥಳ ವಿಸ್ತಳದಲ್ಲಿ ವ ಠಗಳನ್ನು ಕಟ್ಟುರುತ್ತಾರೆ. ಸದರಿ ಮಠಗಳಲ್ಲಿ ಒಪ್ಪಿಸುವ ಹರಿಕೆಗಳು ಜನರ ಸಂದರ್ಶನಗಳು ಸದರಿ ದೇವರ ಮಹತ್ವಕ್ಕೆ ಅನುವಹಿಸಿದ್ದೇ ವಿನಹ ಸ್ಥಳಕ್ಕೆ ಅನುವಹಿಸಲಿಲ್ಲ ಎಂದು ಭಾವಿಸಬೇಕು. ಈ ದೇವರಿಗೆ ಮಲಬಾರಿನ ಭಕ್ತರು ಕೊಡಗಿನ ಭಕ್ತರು ಮಾತ್ರವಲ್ಲ ಇಡೀ ಇಂಡಿಯಾದ ಯೂ ಲೋಕದ ಭಕ್ತರಿಂದ ಮತಜಾತಿ ಭೇದವಿಲ್ಲದೆ ಪೂಜೆಯಾಗಲ್ಪಡುತ್ತೆ. ಕುಂಕತ್ತಾಡಿಪೆರಳಮಲೆ ಮುತ್ತಪ್ಪನೆಂದು ಯಾತ್ರಾರಲ್ಲದೆ ಪರಸನಕಡು ಮ ಎಂದು ಕರೆಯುವದಿಲ್ಲ ಎಂದೂ ಆದ್ದ ಆಲ್ಲಿಯ ಹುಕುಂ ಅಗತ್ಯವಿಲ್ಲವೆಂ ಇದನ್ನೆಲ್ಲಾ ತಮಗಳ ದಿವ್ಯಚಿತ್ತಕ್ಕೆ ತಂದು ಸದರಿ ಪ್ರಕಟಣೆಗೆ ಗನ್ಯಮಾಡದೆ ಸರ್ವರು ತಮ್ಮ ಇಷ್ಟ ಇದ್ದಲ್ಲಿ ಯೂ ವಠಕ್ಕಾಗಲಿ ಹರಿಕ್ಕೆ ಪ್ರಾರ್ಥನೆಗಳನ್ನು ಸಂದರ್ಶನ ಸಹ ಕೊಡಬೇಕಾಗಿ ತಿಳಿಯಿಸುತ್ತೇನೆ.

ಆಲೆಕಂಡಿ ಜಾತಿವಿನ ರಾಜು.

ಕೊಡಗಿನ ಭವಿಷ್ಯ.

ಇಬ್ಬರು ನೇಮಿತ ಜನ ಮುಂದಾಳುಗಳು ಚೀಫ್ ಕಮಿಷನರೊಡನೆ ಅಧಿಕಾರ ವಹಿಸುವ ತಾತ್ಕಾಲಿಕ ಏರ್ಪಾಡು.

"ಸಿ" ಭಾಗದ ಸಂಸ್ಥಾನಗಳ ಅಂದರೆ ಚೀಫ್ ಕಮಿಷನರ್ ಪ್ರಾಂತಗಳ ಆಡಳಿತ ರಚನೆಯ ಬಗ್ಗೆ ಕೇಂದ್ರ ಶಾಸನ ಸಭೆಯಲ್ಲಿ ಚರ್ಚೆ ನಡೆದಾಗ ಕೇಂದ್ರದ ಮಂತ್ರಿಗಳಾದ ಶ್ರೀ ಎನ್. ಗೋಪಾಲಸ್ವಾಮಿ ಐಯ್ಯಂಗಾರ್ ಮತ್ತು ಎನ್. ಗಾಡ್ಗಿಲ್‌ರವರು, ಗೃಹ ಮಂತ್ರಿಯವರ ಪರವಾಗಿ ಈ ಹೇಳಿಕೆಯನ್ನಿತ್ತಿದ್ದಾರೆ.

ಕೇಂದ್ರದಿಂದ ಆಳ್ವಿಕೆಯಾಗುವ ಈ ಭಾಗಗಳ ತಾತ್ಕಾಲಿಕ ಆಡಳಿತ ರಚನೆಯಲ್ಲಿ ಜನಾನುರಾದ ಮುಂದಾಳುಗಳನ್ನು ಸೇರಿಸುವ ತೀರ್ಮಾನವನ್ನು ಸರಕಾರವು ಮಾಡಿದೆ. ದೀರ್ಘವಾಯಿದೆಯ ಏರ್ಪಾಡಿನ ಬಗ್ಗೆ ಬೇಕಾದ ಮುಸೂದೆಯನ್ನು ಶಾಸನ ಸಭೆಯು ಈ ವಿಷಯಿನಲ್ಲೇ ಜಾರಿಗೆ ತರಲಾಗುವದು. ಅದು ಜಾರಿಗೆ ಬರುವಲ್ಲಿ ವರೆಗಿನ ತಾತ್ಕಾಲಿಕ ಸಮಯದಲ್ಲಿ ಈ ಭಾಗದ ಆಡಳಿತ ಜವಾಬ್ದಾರಿಯನ್ನು ನಿರ್ವಹಿಸಲು 'ಚೀಫ್ ಕಮಿಷನರ್-ಇನ್-ಕೌನ್ಸಿಲ್' ಇವರೊಂದಿಗೆ ಇಬ್ಬರು ಮುಂದಾಳುಗಳನ್ನು ನೇಮಿಸಲಾಗುವದು. ಚೀಫ್ ಕಮಿಷನರು ಕೆಲವು ವಿಚಾರಗಳಲ್ಲಿ ತಾನೇ ಸ್ವಯಂ ಆಡಳಿತ ನಡೆಸಿದರೂ ಮತ್ತುಳಿದ ಪ್ರಾಮುಖ್ಯ ವಿಚಾರಗಳಲ್ಲಿ ಈ ಮುಂದಾಳುಗಳ ಅಭಿಪ್ರಾಯ ಕೇಳಿದು ವರ್ತಿಸುವರು.

ಕೇಂದ್ರದಿಂದ ಆಳ್ವಿಕೆಯಾಗುವ ಈ ಭಾಗಗಳ ದೀರ್ಘ ಯೋಜನೆಯ ವಿಚಾರಮಾಡುತ್ತಾ ಶ್ರೀ ಐಯ್ಯಂಗಾರರವರು ಹೀಗೆ ಹೇಳಿದರು. "ಕ್ಷಿಪ್ರದಲ್ಲಿ ಇಲ್ಲವೇ ಸಾವಧಾನವಾಗಿ ಕೊಡಗು ಮತ್ತು ಅಜಮೀರ್ ಮೀರ್‌ವಾರಗಳು ಹತ್ತಿರದ ಯಾವುದೋ ಸಂಸ್ಥಾನದೊಂದಿಗೆ ವಿಲೀನವಾಗಬೇಕು. ಅದ್ದರಿಂದ ಈ ವಿಲೀನವಾಗುವ ವರೆಗಿನ ತಾತ್ಕಾಲಿಕ ಸಮಯದಲ್ಲಿ ಈ ಪ್ರಾಂತಗಳಿಗೆ ಯಾವ ರೀತಿಯ ಸುಧಾರಣೆ ಕೊಡಬಹುದೆಂಬುದೇ ಪ್ರಶ್ನೆಯಾಗಿದೆ. ಸರಕಾರವು ಇದನ್ನು ಆಲೋಚಿಸಿ ತತ್ಕಾಲಕ್ಕೆ ಎರಡು ಜನ ಮುಂದಾಳುಗಳು ಆಡಳಿತದಲ್ಲಿ ಭಾಗವಹಿಸುವ ಅನುಮತಿ ನೀಡಲಿದೆ."

ಈ ಸಂದರ್ಭದಲ್ಲಿ ಕೊಡಗಿನ ಪ್ರತಿನಿಧಿ ಶ್ರೀ ಸಿ. ಎಂ. ಪೂಣಚ್ಚನವರು ಮಾಡಿದ ಭಾಷಣವು ಪೂರ್ಣ ಪ್ರಕಟವಾಗಿಲ್ಲ. ಅವರ ಭಾಷಣವನ್ನು ಉದ್ದೇಶಿಸಿ ಶ್ರೀ ಎನ್. ಗಾಡ್ಗಿಲ್ಲರು ಹೀಗೆ ಹೇಳಿರುವರು. 'ಕೊಡಗಿನ ಮಟ್ಟಿಗೆ ಶ್ರೀ ಪೂಣಚ್ಚನವರ ಭಾಷಣವು, ಅದನ್ನು ಶೀಘ್ರವಾಗಿ ಮದ್ರಾಸಿಗೆ ಯಾ ವೈಸ್‌ರಾಯಿಗೆ ಸಂಯೋಜಿಸಿಬಿಡ ಬೇಕೆಂಬುದನ್ನು ಎಲ್ಲರಿಗೂ ಖಚಿತ ಪಡಿಸುತ್ತದೆ. ಕೊಡಗಿನಲ್ಲಿ ಈಗಾಗಲೇ ಒಂದು ಶಾಸನ ಸಭೆ ಇದೆ. ವಿಲೀನೀಕರಣವಾಗುವ ವರೆಗೆ ಕೊಡಗಿನ ಚೀಫ್ ಕಮಿಷನರು "ಚೀಫ್ ಕಮಿಷನರ್-ಇನ್-ಕೌನ್ಸಿಲ್" ಆಗಿರುವರು.

ತಾಯೇ ಕಾವೇರಿ! ತಾ ಎನಗೆ ಸನ್ಮತಿ! ನಮಸ್ಕಾರ ತಾಯೇ!
ಅನ್ನ ಕೊಡು ಊಟ ಮಾಡೋಣ ಹಸಿವಾಗುತ್ತೆ!
ಕಾಗದ ಕೊಡು, ಅಕ್ಷರವಂತರಾಗೋಣ! ಆಸೆಯಾಗುತ್ತೆ!

ಹೀಗೆಂದು ಆ ತಾಯಿ ಆ ಮಗುವಿಗೆ ಹೇಳಿ ಪ್ರಾರ್ಥನೆ ಮಾಡಿಸುತ್ತಾಳೆ. ಆದ್ದರಿಂದ 'ಕಾವೇರಿ ತಾಯಿ' ಕಾಗದ ಕೊಡಿಸಬೇಕು ತನ್ನ ಕುವರ ಕುವರಿಯರಿಗೆ, ಅವರು ಅಕ್ಷರವಂತರಾಗುವುದಕ್ಕೆ.

ಕಾರ್ಖಾನೆಯಿಂದಲ್ಲವೆ ಕಾಗದ ತಯಾರಾಗಿ ಬರಬೇಕಲ್ಲ! ಇಂತಹದೊಂದು ಕಾರ್ಖಾನೆಯ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಈ ಸಂಸ್ಥೆಗೆ ನೆರವಾಗಿರಿ.

ಹತ್ತು ರೂಪಾಯಿನ ಆರ್ಡಿನರಿ ಶೇರುಗಳೂ ನೂರು ರೂಪಾಯಿನ ಪ್ರಿಫರೆನ್ಸ್ ಗಳೂ ಮಾರಾಟಕ್ಕಿವೆ. ಹೆಚ್ಚಿನ ವಿವರಗಳಿಗೆ ಭಾರತ ದೇಶದಾದ್ಯಂತವಿರುವ ಪ್ರತಿನಿಧಿಗಳಲ್ಲಿ ವಿಚಾರಿಸಿರಿ

ಕಿಂಗ್ ಏಜೆಂಟ್ಸ್
ಮೇಲ್ ಮತ್ತು ಕೆಂಪೆನಿ
ಬಾಕ್ಸ್ ನಂ. 48.
ಸಂಗಿ ಕೆರೆಬೀದಿ ಬೆಂಗಳೂರು.

ಕಾವೇರಿ ಪೇಪರ್ ಮಿಲ್ಸ್ ಮತ್ತು
ಫಾರೆಸ್ಟ್ಸ್ ಇಂಡಸ್ಟ್ರೀಸ್ ಲಿಮಿಟೆಡ್
ಕೊಡಗು ಪ್ರಾಂತದಲ್ಲಿ ಸ್ಥಾಪಿತವಾದದ್ದು
ಬೆಂಗಳೂರು ಫೋನ್ ನಂ. 2966.

ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಾಮುಖ್ಯಾಂಶಗಳು.

ಹೊಸ ಉದ್ಯಮ ರೂ.	6,13,00,000 ವಿಮೆ.
ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ.	27,73,00,000 ,,
ಒಟ್ಟು ನಿಧಿ. ರೂ.	8,30,00,000 ,,
ಸಾ ಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು	10,96,00,000 ,,

1,28,000 ಕ್ಕೆ ವಿಮೆಯಿಂದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರೋಶನ್‌ಲಾಲ್, ಜನರಲ್ ಮೇನೇಜರ್.

ಪಿ. ಡಿ. ಗೋರವಾರ-ಬ್ರಾಂಚ್ ಮೇನೇಜರ್.

ಸ್ವಂತ ಕಛೇರಿ: ಎಂಪೈರ್ ಹೌಸ್, ಹಾರ್ನ್‌ಬಿ. ರೋಡ್, ಫೋರ್ಟ್, ಬೊಂಬಾಯಿ.

ಅಂಗ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:- ಲಾಲ ಶಂಕರ್ ಲಾಲ್.

ಮುಖ್ಯ ಖಚೇರಿ:- ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು.
ಹಕೀಮ್ ಅಜಮಲಖಾನ್.
ಎಸ್. ಶ್ರೀನಿವಾಸ ಅಯ್ಯಂಗಾರ್
ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ಯಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರು, ಮಡಿಕೇರಿ, ಕೊಡಗು.

ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟಾ, ಮಂಗಳೂರು.

ಯುನೈಟೆಡ್ ಕಿಂಗ್ಡಮ್‌ದಲ್ಲಿ ಸಿಗರೇಟಿನ ಬೆಲೆ.

ಯುನೈಟೆಡ್ ಕಿಂಗ್ಡಮ್ ಸಂದರ್ಶಿಸುವವರಿಗೆ ಆಗುವ ಮೊದಲನೆ ವಿಷಯ ಸನ್ನಿವೇಶಗಳಲ್ಲಿ ಸಿಗರೇಟಿನ ಬೆಲೆ ಅಧಿಕವಾದ ಸನ್ನಿವೇಶ ಒಂದಾಗಿರುತ್ತದೆ. ಬ್ರಿಟೈನಿನಲ್ಲಿ ೨೦ ಸಿಗರೇಟುಗಳ ಪೆಕೆಟಿಗೆ ಬೆಲೆ ರೂ. ೨-೮-೦ ಈ ಕಾರಣದಿಂದಾಗಿಯೇ ಸಾವಿರಾರು ಮಂದಿ ಆಂಗ್ಲೇಯರು ತಮ್ಮ ಮನೆಯ ಹಿಂಬದಿಯ ತೋಟಗಳಲ್ಲೇ ಹೊಗೆಸೊಪ್ಪು ಬೆಳೆಸತೊಡಗಿದ್ದಾರಿದೆ. ೨೫ ರಾತ್ರಿ ವರೆಗೆ ಹೊಗೆಸೊಪ್ಪು ಬೆಳೆಸಬಹುದೆಂದು ಕಸ್ಟಮ್ ಮತ್ತು ಎಕ್ಸೈಜ್ ರಿಯಾಯಿತಿಯಿದೆ.

ಅಯೋಗ್ಯತನ ಮತ್ತು ಲಂಚಗೂಳಿತನಕ್ಕಾಗಿ

ಹುದ್ದೆಯಲ್ಲಿ ಅಯೋಗ್ಯರೆಂದು ಕಂಡು ಬಂದುದಕ್ಕೆ ಮತ್ತು ಲಂಚಗೂಳಿತನದ ಅಪರಾಧಕ್ಕಾಗಿ ಉತ್ತರ ಪ್ರದೇಶದಲ್ಲಿ ಈ ವರೆಗೆ ಸುಮಾರು ೬,೦೦೦ ಮಂದಿ ಪೋಲೀಸ್ ಅಧಿಕಾರಿಗಳನ್ನು ಮತ್ತು ಜವಾನರನ್ನು ಉದ್ಯೋಗ್ಯದಿಂದ ತೆಗೆದಹಾಕಲಾಯಿತೆಂದು ಅಲ್ಲಿಯ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಮೋಹನಲಾಲ್ ಗೌತಮರು ಒಂದು ಪ್ರಕಟಣೆಯಲ್ಲಿ ಹೇಳಿರುವರು. ಉತ್ತರ ಪ್ರದೇಶದಲ್ಲಿ ಪೋಲೀಸ್ ದಳದ ಒಟ್ಟು ಸಂಖ್ಯೆ ೩೫,೦೦೦.

ಸರ್ವಧರ್ಮ ಸಮನ್ವಯಚಾರ್ಯ ಶ್ರೀರಾಮಕೃಷ್ಣ ಪರಮಹಂಸ

ಲೇ:—ಶ್ರೀ ವಿ. ಎಸ್ ರಾಮಕೃಷ್ಣ ಬಿ. ಎಸ್ಸಿ (ಆನರ್ಸ್) ಬಿ. ಟಿ.

ಭರತಖಂಡದ ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಕ್ಷೋಭೆಯುಂಟಾಗಿ ಅಖಂಡ ಭಾರತದ ಜನ ಸಾಮಾನ್ಯರಲ್ಲಿ ಮಃಷ್ಪಿಶ ಉಂಟಾಗಿದ್ದಿತು. ಆಂಗ್ಲರು ಭರತಖಂಡವನ್ನು ಆಕ್ರಮಿಸಲು ತೊಡಗಿದ್ದರಿಂದ ಭಾರತದ ರಾಜಕೀಯ ಮಹಾಸೌಧದ ತಳಹಂಯಲು ಅಲ್ಲಾಡಿಸಲ್ಪಟ್ಟ ರಾಜಕೀಯ ಕ್ಷೇತ್ರದಲ್ಲಿ ಪ್ರಚಂಡ ಆಶಾಂತಿ ಆವಿರ್ಭವಿಸಿದ್ದಿತು. ಪಾಶ್ಚಾತ್ಯ ಸಂಸ್ಕೃತಿ ಭಾರತಕ್ಕೆ ಕಾಲಿಟ್ಟುದರಿಂದ ಪ್ರಾಚೀನ ಭಾರತೀಯ ಸಂಸ್ಕೃತಿಗೂ ಅರ್ವಾಚೀನ ಐರೋಪ್ಯಸಂಸ್ಕೃತಿಗೂ ಅನೇಕ ವೇಳೆ ತೀವ್ರ ಘರ್ಷಣೆಗಳುಂಟಾಗತ್ತಲಿದ್ದವು. ಈ ಘರ್ಷಣೆಗಳ ಫಲಿತಾಂಶವಾಗಿ ಐರೋಪ್ಯರನ್ನು ಅನುಕರಿಸಲು ಕಲಿತ ಭಾರತೀಯ ತರುಣರಲ್ಲನೇಕರು ಆರ್ಯಧರ್ಮವನ್ನು ಹಳಿದು ಟೀಕಿಸಿ ನಿಂದಿಸಲು ಆರಂಭಿಸಿದ್ದರು. ಇದರ ಪರಿಣಾಮವಾಗಿ ಧಾರ್ಮಿಕ ಕ್ಷೇತ್ರದಲ್ಲಿ ಧಾರಾಧಲೆಯುಂಟಾಗಿ ಪ್ರಾಚೀನ ಸನಾತನ ಧರ್ಮಕ್ಕೆ ಧೂಳುಹಿಡಿದಂತಾಗಿತ್ತು, ರಾಜಾರಾಮಮೋಹನರಾಯ್, ಕೇಶವ ಚಂದ್ರಸೇನ, ದಯಾನಂದ ಸರಸ್ವತಿ ಮುಂತಾದ ಮಹನೀಯರು ಧಾರ್ಮಿಕ ಮತೀಯ ಕ್ಷೇತ್ರಗಳಲ್ಲಿ ತಲೆದೋರಿದ ಗ್ಲಾನಿಯನ್ನು ಪರಿಹರಿಸಿ ಪ್ರಾಚೀನ ಧರ್ಮದ ಪುನರುತ್ಥಾನವೆಸಗಲು ಪ್ರಯತ್ನಿಸಿದರಾದರೂ ಅಷ್ಟು ಫಲಕಾರಿಯಾಗದೆ ಹೋದರು. ಇಂಥ ರಾಜಕೀಯ, ಸಾಂಸ್ಕೃತಿಕ ಆಧ್ಯಾತ್ಮಿಕ ದಾರ್ಬಲ್ಯದ ಕಾಲದಲ್ಲಿ ಭರತಖಂಡದ ಸನಾತನ ಧರ್ಮವನ್ನು ಮತ್ತೊಮ್ಮೆ ಜಗತ್ತಿಗೆ ಸಾರಿ ಸರ್ವತತ್ವ ಸರ್ವಧರ್ಮಗಳಲ್ಲಿ ಸಮನ್ವಯವನ್ನು ಸ್ವಂತ ಪರಿಶೋಧನೆಯಿಂದ ತಂದು ಧರ್ಮತತ್ವಗಳ ಏಕೈಕ ಅಖಂಡತೆಯನ್ನು ಸಾರಿದ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ಜನನವಾಯಿತು.

ಯಾವ ಮಹೋನ್ನತ ದೈವಿಕ ಪುರುಷನ ಜನ್ಮದಿನವನ್ನು ಆನ್ಯಂತ ಭರತಖಂಡವು ಮೂರ್ಕಿಸೇ ತಾರೀಕಿನಿಂದ ಹಲವು ದಿನಗಳ ಪರ್ಯಂತ ಆಚರಿಸಿತೋ ಆ ಯುಗಾವತಾರ ಶ್ರೀರಾಮಕೃಷ್ಣ ಪರಮಹಂಸರು ಬಂಗಾಳ ಪ್ರಾಂತದ ಹೂಗ್ಲಿ ಜಿಲ್ಲೆಯಲ್ಲಿ ಕಾಮಾರಪುಕುರ ಎಂಬ ಗ್ರಾಮದಲ್ಲಿ ಸಾಧಾರಣ ೧೧೫ ವರ್ಷಗಳ ಹಿಂದೆ ಅವತರಿಸಿದರು. ಅವರ ಬಾಲ್ಯದ ಹೆಸರು ಗದಾಧರ ಎಂಬುದಾಗಿತ್ತು. ಲೋಕೋದ್ಧಾರಕರಾದ ಈ ಮಹನೀಯರ ಜನನಕಾಲದಲ್ಲಿ ಅವರ ತಂದೆಯಾದ ಖುದೀರಾಮ ಭಟ್ಟಾಚಾರ್ಯರಿಗೂ ತಾಯಿಯಾದ ಚಂದ್ರಮಣಿದೇವಿಯರಿಗೂ ಅಪೂರ್ವವಾದ ಅನುಭವಗಳಾದವು. ದೈವೀಕಪುರುಷರ ಜನನಕಾಲದಲ್ಲಿ ಮೂರ್ತಾ ಪಿತರಿಗೆ ತಂಥಹ ಅನುಭವಗಳಾಗುವುದು ಸ್ವಾಭಾವಿಕವು. ಗದಾಧರನು ಶೈಶವವನ್ನು ದಾಟಿ ಬಾಲ್ಯದಲ್ಲಿ ಕಾಲಿಟ್ಟೊಡನೆ ಅವನನ್ನು ಪಾಠ ಶಾಲೆಗೆ ಕಳುಹಿಸಿದರು. ಆದರೆ ಪಾಠ ಶಾಲೆಯಲ್ಲಿ ಗದಾಧರನು ಹೆಚ್ಚು ಪ್ರಗತಿಯನ್ನು ಪಡೆಯಲಿಲ್ಲ ಆತನಿಗೆ ಬೇಕಾದ್ದು ಹೊಟ್ಟೆಹೊರೆಯಲಿಕ್ಕಾಗಿ ಗಳಿಸುವ ಅಕ್ಷರವಿದ್ಯೆಯಾಗಿರಲಿಲ್ಲ. ಆತ್ಮದ ಅನಂತ ಆನಂದವನ್ನು ಕೊಡಬಲ್ಲ ಬ್ರಹ್ಮವಿದ್ಯೆಯೇ ಆತೇಜಃಪುಂಜ ಬಾಲಕನಿಗೆ ಬೇಕಾದ ವಿದ್ಯೆಯಾಗಿದ್ದಿತು.

ಗದಾಧರನು ಏಳು ವರ್ಷದವನಿದ್ದಾಗ ಒಂದು ವಿಚಿತ್ರ ಘಟನೆಯು ನಡೆಯಿತ. ಒಮ್ಮೆ ಆತನು ಗದ್ದೆಯ ತೆವರಿಯಲ್ಲಿ ನಡೆಯುತ್ತಾ ಜೋಬಿನಲ್ಲಿದ್ದ ಕಾಳುಗಳನ್ನು ಮೆಲ್ಲುತ್ತಾ ಮುಂದೆ ಮುಂದೆ ಹೋಗತ್ತಲಿದ್ದನು. ಅವನ ಕಣ್ಣಿಗೆ ಎತ್ತೆತ್ತಲೂ ಪ್ರಕೃತಿಯ ಸೀಮಾತೀತ ಸೌಂದರ್ಯವು ಗೋಚರಿಸುತ್ತಲಿತ್ತು. ಅದನ್ನು ನೋಡಿ ಆನಂದಿಸುತ್ತಿರುವಷ್ಟರಲ್ಲಿ ಕರಿಯ ಮೋಡವೊಂದು ಆಗಸದಲ್ಲಿ ಕವಿದುಕೊಂಡಿತು. ಆ ಕರಿಯ ಮೋಡದ ಅಡಿಭಾಗದಲ್ಲಿ ಬಿಳೀ ವರ್ಣದ ಹಕ್ಕಿಗಳು ಹಾರಾಡಿದವು. ಈ ಕಪ್ಪು ಬಿಳೀ ಬಣ್ಣಗಳ ತೀವ್ರ ವ್ಯತ್ಯಾಸವನ್ನು ಸುಖದುಃಖಾದಿ ದ್ವಂದಗಳನ್ನೂ ಈಕ್ಷಿಸಿ ಚಿಂತಿಸುತ್ತಿದ್ದ ಗದಾಧರನಿಗೆ ಪ್ರಜ್ಞೆತಪ್ಪಿ ತೆವರಿಯ ಮೇಲೆ ಬಿದ್ದು ಬಿಟ್ಟನು. ಅವನ ಈ ಸ್ಥಿತಿಯಲ್ಲಿ ಯಾರೋ ನೋಡಿ ಗದಾಧರನನ್ನು ಅವನ ಮನೆಗೆ ಎತ್ತಿಕೊಂಡೊಯ್ದರು. ಅದೇ ಭಗವಾನ್ ಶ್ರೀರಾಮಕೃಷ್ಣರಿಗಾದ ಪ್ರಥಮ ಭಾವಸಮಾಧಿ.

ರಾಮಕೃಷ್ಣರು ವಿಧಿಯ ನಿಯಂತ್ರಣದಂತೆ ಆಗ ತಾನೇ ದಕ್ಷಿಣೇಶ್ವರದಲ್ಲಿ ಕಲಕಲನಿನಾದಿಸುವ ಭಾಗೀರಥಿಯ ದಡದಲ್ಲಿ ಕಟ್ಟಲ್ಪಟ್ಟ ಕಾಳಿಕಾದೇವಾಲಯದಲ್ಲಿ ಅರ್ಚಕರಾದರು. ಆವರ ಪೂಜಾವಿಧಾನ ಅದ್ಭುತವೂ ಸೋಜಿಗವೂ ಆಗಿದ್ದಿತು. ಅವರಿಗೆ ದೇವಿಯು ಶಿಲಾಮೂರ್ತಿ ಅಜೇತನವಾದ ಶಿಲೆಯಾಗಿರಲಿಲ್ಲ. ಚೇತನಾತ್ಮಕವಾದ ವಿಶ್ವದ ಅನಂತಮಯೆಯು ಸಾಂದ್ರೀಕರಣವೇ ಆ ಶಿಲೆಯಾಗಿದ್ದಿತ್ತು. ಆ ಭವ್ಯ ಶಿಲಾಮೂರ್ತಿಯಲ್ಲಿ ಅಡಕವಾದ ಜಗಜ್ಜನನಿಯನ್ನು ನೋಡುವ ಮಹದಾಕಾಂಕ್ಷೆ ರಾಮಕೃಷ್ಣರಲ್ಲಿ ಆವಿರ್ಭವಿಸಿತು. ಸತ್ಯ ಸಾಕ್ಷಾತ್ಕಾರದ ತೀವ್ರ ಪಿಪಾಸೆಯಿಂದ ನೊಂದ ಆ ಮಹನೀಯರು ಮನಸಿನ ಭಾವಶಕ್ತಿಗೆ ಗೋಚರ ಸಾಧ್ಯವಾದ ಸಾಕಾರನಾದ ಈಶ್ವರನನ್ನು ಸಾಕ್ಷಾತ್ಕರಿಸಿಕೊಳ್ಳಲು ಬದ್ಧಕಂಕಣರಾದರು. ಆ ಸಗುಣ ಸಾಕಾರನಾದ ಈಶ್ವರನೇ ಜಗತ್ತಿನ ನಿರುಪಮ ಸೌಂದರ್ಯ, ಆತನೇ ತತ್ವನೇತರ್ತ ಪ್ರಮೆಯ, ಆತನೇ ಜಗತ್ತಿನ ಜನಕ ಹಾಗೂ ಜನನಿ. ಆತನನ್ನೇ ಜನನಿಯೆಂದು ಸಂಬೋಧಿಸಿ ನಾವು ಪೂಜಿಸುವೆವು. ಈ ಭಾವವು ಶ್ರೀರಾಮಕೃಷ್ಣರಲ್ಲಿ ಪ್ರಚೋದನೆಗೊಂಡೊಡನೆ ಸಗುಣಸಾಕಾರಳಾದ ಜನನಿಯ ದರ್ಶನಾಕಾಂಕ್ಷೆಯಿಂದ ಅವರು ಹುಚ್ಚರಂತಾದರು. ಸತತವೂ ದರ್ಶನವೀಯೆಂದು ಜನನಿಯನ್ನು ಪೂಜಾವೇಳೆಗಳಲ್ಲೂ ಇತರ ಸಮಯಗಳಲ್ಲೂ ಪ್ರಾರ್ಥಿಸುತ್ತಿದ್ದರ. ಅನ್ನಾಹಾರಗಳನ್ನು ತ್ಯಜಿಸಿ ದೇವಿಯ ದರ್ಶನಾಕಾಂಕ್ಷರಾದರು. ಆದರೂ ಜಗಜ್ಜನನಿಗೋಚರಿಸಲಿಲ್ಲ. ಕಡೆಗೊಂದು ದಿನ ಸತ್ಯಸಾಕ್ಷಾತ್ಕಾರದ ತೀವ್ರಾಸಕ್ತಿಯ ದೋರಿ ದೇವಿಯ ವಿಗ್ರಹದ ಮುಂದೆ ನಿಂತು ತಮ್ಮ ಶಿರಸ್ಸನ್ನು ದೇವಿಯ ಖಡ್ಗದಿಂದ ತುಂಡರಿಸಿಕೊಳ್ಳಲು ಸಿದ್ಧರಾದರು. ಆದರೆ ನೋಡುತ್ತಾರೆ! ಎಲ್ಲೆಲ್ಲೂ ಅನಂತ ಶೂನ್ಯವು ಆವರಿಸಿದೆ. ಅದ್ಭುತ ಕಾಂತಿಯೊಂದಲ್ಲದೆ ಬೇರೇನೂ ಅವರಿಗೆ ಗೋಚರಿಸಲಿಲ್ಲ ಆ ಮಹಾಕಾಂತಿಯು ನಾನಾ ನಾಲಗೆಗಳಿಂದ ತಾವು ನುಂಗಲ್ಪಟ್ಟಂತೆ ಭಾಸವಾಗಿ ರಾಮಕೃಷ್ಣರು ನೆಲದ ಮೇಲೆ ಬಿದ್ದು ಬೆಟ್ಟನು. ಅನಂಗೆ ಬಾಹ್ಯಪ್ರಜ್ಞೆ ಇರಲಿಲ್ಲ. ಅನೇಕ ಸಮಯದ ನಂತರ ಪ್ರಜ್ಞೆ ತಿಳಿದಿದ್ದಾಗ ತನ್ನ ಇರುವಿಕೆಯ ಸಮಾಚಾರಗಳು ಅವರ ಗಮನಕ್ಕೆ ಪುನಃ ಬಂದು ಆಶ್ಚರ್ಯಚಕಿತರಾದರು. ಆದರೆ ಹೃದಯದಲ್ಲಿ ಅದ್ಭುತವೂ ಸೀಮಾತೀತವೂ ಅವರ್ಣನೀಯವೂ ಆದ ಆನಂದವೊಂದು ಅನಂತಸಾಗರದ ತೆರೆಗಳಂತೆ ಅಂದೋಲನವನ್ನೆಬ್ಬಿಸಿದ್ದಿತು. ಸತ್ಯ ಸಾಕ್ಷಾತ್ಕಾರದ ಪ್ರಥಮ ಸೋಪಾನವನ್ನು ಆ ಮಹನೀಯರು ಅಡರಿದಂತಾಗಿ ಸತ್ಯದ ನಾನಾರೂಪರೇಷೆ ವಿನ್ಯಾಸಗಳನ್ನು ದರ್ಶನ ಮಾಡುವ ಲಾಲಸೆ ಅವರಲ್ಲಿ ಪ್ರಬಲವಾಯಿತು.

ಈ ಅಭೂತಪೂರ್ವ ಅನುಭವವಾದ ಕೆಲ ಕಾಲದಲ್ಲೇ ರಾಮಕೃಷ್ಣ ಪರಮಹಂಸರಿಗೆ ಸಾಕಾರಳಾದ ಭುವನಮಾತೆಯು ತನ್ನ ದಿವ್ಯ ಸುಂದರ ರೂಪದೊಡನೆ ಪ್ರತ್ಯಕ್ಷಳಾದಳು. ಈ ರೀತಿ ಸಾಕಾರ ಈಶ್ವರನ ದರ್ಶನದಿಂದ ಪುಳಕಿತಾಂಗರಾದ ಪರಮಹಂಸರು ಬುದ್ಧಿ ವಾಕ್ಕು ಕ್ರಿಯಾಶಕ್ತಿಗಳಿಗೆ ಮಾತ್ರ ಗೋಚರಿಸುವ ಸಚ್ಚಿದಾನಂದ ಸ್ವರೂಪನ ವಿವಿಧ ವಿನ್ಯಾಸಗಳನ್ನು ನೋಡಲು ಕಾತರರಾದರು. ಸರ್ವವ್ಯಾಪಿಯೂ ಈಶ್ವರನನ್ನು ಅನೇಕ ವಿಧಗಳಿಂದ ಪೂಜಿಸಿ ಸಾಕ್ಷಾತ್ಕರಿಸಿಕೊಂಡರು. ಪ್ರಾಚೀನ ಕಾಲದ ಆರ್ಯದರ್ಶನಿಕರಂತೆ ಜ್ಞಾನಮಯವೂ ಶುದ್ಧವೂ ಆನ ಜೀವನವನ್ನು ನಡಿಸಿ ಸರ್ವಶಕ್ತನಾದ ಭಗವಂತನನ್ನು ಒಲಿಸಿಕೊಂಡರು. ಶಾಂತಭಾವದಿಂದ ಸಗುಣಬ್ರಹ್ಮದ ಉಪಾಸನೆ ಮಾಡಿದ ಮೇಲೆ ದಾಸ್ಯಭಾವದಿಂದ ಈಶ್ವರನನ್ನು ಒಲಿಸಿಕೊಂಡು ಕೃತಕಾರ್ಯರಾದರು. ಪೌರಾಣಿಕ ಭಕ್ತ ಶಿರೋಮಣಿಯೂದ ಆಂಜನೇಯನಂತೆ ಭಗವಂತನ್ನು ತನ್ನ ಯಜಮಾನ ಅಥವಾ ಸ್ವಾಮಿ ಎಂದು ಭಾವಿಸಿ ತಾನು ಯಜಮಾನನ ಕೇವಲ ಕಿಂಕರನಾಗಿ ಸೇವೆ ನಡಿಸಿ ಶ್ರೀರಾಮನನ್ನು ಪ್ರತ್ಯಕ್ಷ ದರ್ಶನಮಾಡಿದರು. ಆ ಕಾಲದಲ್ಲಿ ಪರಮಹಂಸರು ವಾನರರಂತೆ ಮರಗಳಲ್ಲೇ ವಾಸಮಾಡುತ್ತಾ ಹಣ್ಣು ಹಂಪಲುಗಳನ್ನು ತಿಂದು ಜೀವಿಸುತ್ತಿದ್ದರು. ಪಾಸ್ಯಭಾವದಿಂದ ಶ್ರೀರಾಮ ಚಂದ್ರನನ್ನು ಆರಾಧಿಸಿ ಸಫಲರಾದ ಮೇಲೆ ಮಧುರ ಭಾವಾಲಂಬಿಗಳಾದರು. ಆ ಸಮಯದಲ್ಲಿ ಭಗವಾನ್ ಶ್ರೀಕೃಷ್ಣನನ್ನು ರಾಧೆಯು ಪೂಜಿಸಿ ತನ್ನ ಮಾನಸ ಸಾಮ್ರಾಜ್ಯದ ಅಧಿನಾಯಕನಾಗಿ ಸ್ಥಾಪಿಸಿಕೊಂಡಂತೆ ತಾನು ಭಗವಂತನ ಪತ್ನಿ ಎಂಬ ಆದರ್ಶ ಮಾಧುರ್ಯಭಾವವನ್ನಿಟ್ಟುಕೊಂಡು ಶ್ರೀಕೃಷ್ಣ ದರ್ಶನಾಕಾಂಕ್ಷಿಗಳಾದರು. ತನ್ನನ್ನೂ ರೆಗಳಿಗೆ ಅಗಲಿರಲು ಪರಿತಪಿಸುತ್ತಿದ್ದ ರಾಧೆಯ ಹೃನ್ಮಂದಿರದಲ್ಲಿ ನಿತ್ಯ ಶುದ್ಧನಾಗಿ ವಿಭ್ರಾಜಿಸುತ್ತಲಿದ್ದ ಅರವಿಂದಾಕ್ಷನಾದ ಶ್ರೀಕೃಷ್ಣನು ಪರಮಹಂಸರಿಗೆ ಗೋಚರಿಸಿ ಅವರ ಶರೀರದಲ್ಲಿ ಹೊಕ್ಕು ಅಂತರ್ಧಾನ ಹೊಂದಿದನು. ತರುವಾಯ ಪರಮಹಂಸರು ಸಖ್ಯಭಾವದಿಂದ ಭಗವಂತನನ್ನು ತನ್ನ ಮಿತ್ರ ಎಂಬುದಾಗಿ ಭಾವಿಸಿ ಆರಾಧಿಸತೊಡಗಿದರು. ಹೇಗೆ ಕ್ಷತ್ರಿಯೋತ್ತಮನಾದ ಅರ್ಜುನನನು ಕೇವಲ ಸ್ನೇಹಭಾವದಿಂದ ಭಗವಂತನನ್ನು ಉಪಾಸನೆ ಮಾಡಿ ವಿರಾಟ ಸ್ವರೂಪಿಯಾದ ಈಶ್ವರನನ್ನು ಸಾಕ್ಷಾತ್ಕರಿಸಿಕೊಂಡನೋ ಅಂತೆಯೇ ಪರಮ ಹಂಸರು ತಾನು ಅರ್ಜುನನೆಂಬ ಭಾವದಿಂದ ವರ್ತಿಸಿ ವಿಶ್ವಸ್ತ್ರೀಪುರುಷರನ್ನೂ ಗೋಪಿಜನ ಹೃದಯಸಾಮ್ರಾಜ್ಯದ ಅಧಿನಾಯಕನೂ ಆದ ಭಗವಾನ್ ಶ್ರೀಕೃಷ್ಣನನ್ನು ದರ್ಶನಮಾಡಿದರು ತರುವಾಯ ಹೇಗೆ ಕೌಸಲ್ಯೆಯು ಶ್ರೀರಾಮ ಚಂದ್ರನನ್ನು ಮಗುವೆಂಬ ಭಾವದಿಂದ ಆರಾಧಿಸಿ ವಾತ್ಸಲ್ಯಭಾವನೆಯಿಂದ ಈಶ್ವರನಲ್ಲಿ ಲೀನೆಯಾದಳೋ ಅಂತೆಯೇ ರಾಮಲಾಲ ಎಂಬ ಶ್ರೀರಾಮ ಚಂದ್ರನ ಶಿಶುಮೂರ್ತಿಯನ್ನು ತಾಯಿಯಂತೆ ವಾತ್ಸಲ್ಯಭಾವದಿಂದ ಉಪಾಸನೆಮಾಡಿ ಬಲಭಾಸ್ಕರನಂತೆ ರಂಜಿಸುವ ಶ್ರೀರಾಮ ಚಂದ್ರನನ್ನು ಪ್ರತ್ಯಕ್ಷಕಂಡು ಕಂಚವೇಮಹಾಭಾವಗಳ ಸಾಧನೆಯಿಂದ ಕೃತಕೃತ್ಯರಾಗಿ ಸಗುಣಸಾಕಾರನಾದ ಸಚ್ಚಿದಾನಂದ ಪರಬ್ರಹ್ಮದ ನಿರಂತರದರ್ಶನದಿಂದ ಜೀವನ್ಮುಕ್ತರಾದರು.

ಈ ಸಾಧನೆಗಳಿಂದ ಭಗವಂತನನ್ನು ಈಕ್ಷಿಸಿ ಧನ್ಯರಾದ ಮೇಲೆ ಪರಮಹಂಸರಿಗೆ ತಾಂತ್ರಿಕವಿಧಾನಗಳಿಂದ ಇಂದ್ರಿಯಗಳನ್ನು ನಿಗ್ರಹಿಸಿ ಮಾಯೆಯನ್ನು ಬಹಿರ್ಮುಖವಾಗಿ ತಿರುಗಿಸಿ ಕೇವಲ ಹಟಸಾಧನೆಯಿಂದ ಭಗವಂತನ್ನು ವರಿಸಿಕೊಳ್ಳುವ ಸಂದರ್ಭವೂ ದೊರೆಯಿತು. ಭೈರವೀ ಬ್ರಾಹ್ಮಣಿ ಎಂಬ ಸಾಧಕಿಯೋರ್ವಳಿಂದ ತಾಂತ್ರಿಕ ಸಾಧನೆಯು ಬೀಜಮಂತ್ರನನ್ನು ಸಾಧಿಸಿದ ಮೇಲೆ ಇಂದ್ರಿಯಗಳನ್ನು ಬಿಗಿ ಹಿಡಿದು ಅಮಿತ ವೈರಾಗ್ಯಸಾಧನೆಯಿಂದ ಈಶ್ವರ ಪ್ರಸಾದನವನ್ನು ಪಡೆದರು. ಆ ತರುವಾಯ ಊಹಿಸಲಸದಳವಾದ ನಿರ್ಗುಣನಿರಾಕಾರ ಪರಬ್ರಹ್ಮದ ಅನುಭವವೂ ಅವರಿಗೆ ಉಂಟಾಯಿತು

ಕೊಡಗು ಪ್ರಾಂತೀಕ ಸಹಕಾರಿ, ಮೂರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320-0-0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆಮಾಡುವ ಪಂಪುಗಳು (Spraying Pumps)
7. $\frac{3}{4}$" $\frac{5}{8}$" $\frac{1}{2}$" $\frac{3}{8}$" $\frac{1}{4}$" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52–26

CRESCENT

FOR PROTECTION AND SERVICE.

It is best to represent and insurc with

The CRESCENT Insurance Co., Ltd.,

H: O: BOMBAY.] [*Established 1919.*

For particulars write to:-

Sri B. A. Pooviah *Organiser Pollibetta, Coorg.*

or The Branch Manager, *133 B. Brigade Road, Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ. ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿತ್ತು.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,79,000.
ಕ್ಷೇಮನಿಧಿ	ರೂ.	55,000.
ಇತರ ನಿಧಿಗಳು	ರೂ.	28,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವದು

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಊಡಿನ ಮೇಲೆ ಸಹ ಸಾಲ ಕೊಡಲಾಗುವದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟ್ ಮಾಡಲ್ಪಡುವದು. ಫೈರ್ ಮತ್ತು ವಾರ್ಡಷ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವದು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಚ್ಚಯ್ಯ, M. L. C. ಪ್ರೆಸಿಡೆಂಟ್ ಮತ್ತು ಮೆಜಾಸ್ಟ್ರಿ.

ತೋತಾಪುರಿಯೆಂಬ ಸಾಧಕನಾದ ಅಖಂಡ ಆದ್ವೈತಿಯೊಬ್ಬನಿಂದ ನಿರ್ಗುಣನಿರಾಕಾರ ಈಶ್ವರಾಧನೆಯ ಬೋಧನೆಯಾದ ನೇಲೆ ಮನಸ್ಸನ್ನು ನಿಗ್ರಹಿಸಿ ಕೇಂದ್ರೀಕರಿಸಿ ಸಾಕಾರಳಾದ ಮಾತೆಯ ರೂಪವನ್ನು ಖಂಡಿಸಿ ಅವರು ನಿರ್ವಿಕಲ್ಪ ಸಮಾಧಿಗೆ ಅಡರಿದರು. ಮೂರು ದಿನಗಳ ವರೆಗೆ ಅವರ ದೇಹದಲ್ಲಿ ಪ್ರಜ್ಞೆ ಇರಲಿಲ್ಲ. ಅವರ ಮುಖಮಂಡಲದಲ್ಲಿ ದೇದೀಪ್ಯಕಾಂತಿಯು ಹೊಳೆಯುತ್ತಿದ್ದಿತು. ದೇಹವು ಸ್ತಂಭೀಭೂತವಾಗಿದ್ದಿತು. ತಾನು ಳಂ ವರ್ಷಗಳ ಸಾಧನೆಯಿಂದ ಗಳಿಸಿದ ಈ ನಿರ್ವಿಕಲ್ಪಾವಸ್ಥೆಯನ್ನು ಪರಮಹಂಸರು ಕೇವಲ ಮೂರ ದಿನಗಳಲ್ಲಿ ಸಾಧಿಸಿದ್ದನ್ನು ಕಂಡ ತೋತಾಪುರಿ ಆಶ್ಚರ್ಯಚಕಿತನಾದನು. ಪರಂತು ಪರಮ ಹಂಸರು ಸಾಕಾರದಿಂದ ನಿರಾಕಾರಕ್ಕೆ, ಭಕ್ತಿಯಿಂದ ಜ್ಞಾನಕ್ಕೆ, ಸಗುಣದಿಂದ ನಿರ್ಗುಣಕ್ಕೆ, ಸ್ಥೂಲದಿಂದ ಸೂಕ್ಷ್ಮಕ್ಕೆ ಅಡರಿ ಸಾಮಾನ್ಯರಿಂದ ಗ್ರಹಿಸಲೂ ಅಸದಳವಾದ ಅಖಂಡ ಪರಬ್ರಹ್ಮ ತತ್ವದಲ್ಲಿ ಲೀನರಾಗಿ ಸಚ್ಚಿದಾನಂದದ ವಾಸ್ತವ ಅನುಭವವನ್ನು ಪಡೆದು ಲೋಕಪೂಜ್ಯರಾದರು.

ಹಿಂದೂ ತತ್ವರೀತ್ಯಾ ಈಶಸಾಕ್ಷಾತ್ಕಾರ ಗಳಿಸಿಕೊಂಡ ಪರಮಹಂಸರು ಭಾರತಕ್ಕೆ ಪದಾರ್ಪಣಮಾಡಿ ಆಗ ತಾನೇ ಪ್ರಭಾವ ಬೀರಲು ಉಪಕ್ರಮಿಸಿದ್ದ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳ ಮೂಲಕವೂ ಭಗವಂತನ ಸಾಕ್ಷಾತ್ಕಾರವನ್ನು ಮಾಡಿಕೊಂಡರು. ಫಕೀರನೊಬ್ಬನಿಂದ ಇಸ್ಲಾಂ ಧರ್ಮ ದೀಕ್ಷೆ ಪಡೆದು ಕೇವಲ ಇಸ್ಲಾಂ ಧರ್ಮ ಅನುಷ್ಟಿಸಿ ಅಂತಿಮ ಧ್ಯೇಯವನ್ನು ಸಾಧಿಸುವ ಮಹನೀಯರಂತೆ ಸಾಧನೆ ನಡೆಸಿ ಸಫಲರಾದರು. ಅವರಿಗೆ ಪೂಜ್ಯನೂ ಭ್ರಾತೃಭಾವದ ವಿಶಾಲ ತತ್ವಬೋಧಕನೂ ಆದ ಪೈಗಂಬರ ಮಹಮ್ಮದನು ಪ್ರತ್ಯಕ್ಷನಾಗಿ ಅವರ ಅನಂತ ಧರ್ಮಸಾಗರದಲ್ಲಿ ಲೀನನಾದನು. ಈ ಅನ್ಯಮತಾನುಷ್ಠಾನದಿಂದಲೂ ಏಕಮೇವಾದ್ವಿತೀಯ ಬ್ರಹ್ಮಸಾಧನೆಗೈದ ಮೇಲೆ ಪರಮಹಂಸರು ಕ್ರೈಸ್ತ ಮತಾವಲಂಬಿಗಳಾಗಿ ಸರಳ ಶಬ್ದವಾದ ಕೇ ಜೋಪೂರ್ಣ ಜೀವನವನ್ನು ನಡೆಯಿಸಾಗಿಸಿದರು. ಕೆಲ ಕಾಲದಲ್ಲೇ ದೇವಮಾನವನೂ ಪರರ ದುಃಖಕ್ಕಾಗಿ ತನ್ನೆದೆಯ ಬಿಸಿರಕ್ತವನ್ನು ಶಿಲುಬೆಯ ಮೇಲೆ ಚೆಲ್ಲಿದ ಹತಾತ್ಮನೂ ಆದ ಭಗವಾನ್ ಏಸುಕ್ರಿಸ್ತನು ಅವರಿಗೆ ಗೋಚರಿಸಿ ಅವರ ಕಾಂತಿಮೆತ್ತ ದೇಹದಲ್ಲಿ ಐಕ್ಯನಾದನು. ಹೀಗೆ ಆರ್ಯಧರ್ಮದ ವಿವಿಧ ವಾಹಿನಿಗಳು ಸಂಗವಿಸಿ ಉಂಟಾದ ಆ ಮಹಾಸಾಗರಕ್ಕೆ ಇಸ್ಲಾಂ, ಕ್ರೈಸ್ತ ಮತ್ತಿತರ ಮತ ತತ್ವಗಳ ಮಹಾ ವಾಹಿನಿಗಳೂ ಸೇರಿ ಸೀಮಾತೀತ ಸಮನ್ವಯ ಧರ್ಮ ಪ್ರಧಾನವಾದ ಮಹಾ ಸಾಗರವು ರಚನೆಯಾಯಿತು. ಪೂಜ್ಯರು ಲೋಕವಂದ್ಯರೂ ಆದ ಶ್ರೀರಾಮಕೃಷ್ಣ ಪರಮಹಂಸರು ಸರ್ವ ಧರ್ಮಸಮನ್ವಯಾಚಾರ್ಯರೆಂಬ ಅಭಿಧಾನದಿಂದ ಕೀರ್ತಿಸಲ್ಪಟ್ಟ ಸರ್ವಲೋಕವಂದ್ಯರಾದರು.

ಪರಮಹಂಸರು ಸರ್ವ ಧರ್ಮಗಳೆ ಏಕೈಕ ಐಕ್ಯತೆಯನ್ನು ಜಗತ್ತಿಗೆ ಸಾರಿದ ಮೇಲೆ ಸಕಲ ಸ್ತ್ರೀ ಪುರುಷಸಮೂಹವನ್ನೂ ಜಗಜ್ಜನನಿಯ ರೂಪದಿಂದ ಮಾತ್ರ ನೋಡಬೇಕೆಂದು ತಮ್ಮ ದೈವೀ ತತ್ವವನ್ನು ಸ್ವತಃಪ್ರಯೋಗದ ಮೂಲಕ ಪ್ರಕಾಶ ಪಡಿಸಿದರು. ಅವರ ಧರ್ಮಪತ್ನಿಯೂದ ಶಾರದಾಮಣಿಯನ್ನು ಇಂದ್ರಿಯಾತೀತವಾದ ಭಕ್ತಿ ರಸದಿಂದ ನೋಡಿ ಅಕೆ ಸಾಕ್ಷಾತ್ ಜಗಜ್ಜನನಿಯೆಂಬ ರಸೋನ್ಮಾದ ಭಾವನೆಯಿಂದ ಹಿರಿಹಿಗ್ಗಿ ಅಕೆಯನ್ನು ಪೀಠದಲ್ಲಿಟ್ಟು ಪೂಜಿಸಿ ನಮಸ್ಕರಿಸಿದರು. ಸಾಕ್ಷಾತ್ ಶಕ್ತಿ ಸ್ವರೂಪಿಣಿಯೂದ ಆ ಮಾತೆ ಶ್ರೀರಾಮಕೃಷ್ಣ ಪರಮಹಂಸರಿಂದಲೇ ಪೂಜಿತಳಾಗಿ ನಿಜವಾಗಿಯೂ ಜಗನ್ಮಾತೆಯೂಗಿ ವಿಭ್ರಾಜಿಸಿದಳು.

ಸರ್ವಧರ್ಮ ಸಮನ್ವಯಾಚಾರ್ಯರಾದ ಪರಮಹಂಸರಿಂದೆಗೆ ಆಂಗ್ಲವಿದ್ಯಾವಿಶಾರದರಾದ ಅನೇಕ ಮಹನೀಯರು ಆಗಮಿಸಿ ಅವರ ಚರಣತಲದಲ್ಲಿ ಶಿಶುಗಳಂತೆ ಮಂಡಿಸಿ ಪರಮಹಂಸರಿಂದ ಶಕ್ತ್ಯಾಸಾಕ್ಷಾತ್ಕಾರವನ್ನು ಪಡೆದರು. ಪ್ರಜ್ಞಾಂಡ ಪ್ರತಿಭಾನ್ವಿತರೂ ಆರ್ಷೇಯ ಹಿಂದೂ ಧರ್ಮದ ಪುನರುದ್ಧಾರಕರೂ ಪರಮಹಂಸರ ಪಟ್ಟ ಶಿಷ್ಯರೂ ಆದ ಸ್ವಾಮಿವಿವೇಕಾನಂದರು ಪರಮಹಂಸರ ಸನ್ನಿಧಿಯಲ್ಲಿ ಅಖಂಡ ಬ್ರಹ್ಮದ ದಿವ್ಯಸಾಕ್ಷಾತ್ಕಾರ ಹೊಂದಿ ಅಮರವಾದ ಆರ್ಯ ತತ್ವವನ್ನು ಪಾಶ್ಚಾತ್ಯ ದೇಶಗಳಿಗೂ ಸಾರಿದರು ಪರಮಹಂಸರು ಸಾಮಾನ್ಯ ದೇಹಯಾತನೆಯಿಂದ ಭೌತಿಕ ದೇಹವನ್ನು ತ್ಯಜಿಸಿದರೂ ಅವರಿಂದ ಹೊತ್ತಿಸಲ್ಪಟ್ಟ ಪ್ರಚಂಡ ಜ್ಯೋತಿ, ಭಾರತದ ಮೂಲಕ ವಿಶಾಲವಿಶ್ವಕ್ಕೆ ಸರ್ವದಾ ಮಾರ್ಗದರ್ಶಕವಾಗಿರುವುದು!

ಬೇಕಾಗಿದ್ದಾರೆ

ನಮ್ಮ ಅಮೇರಿಕನ್ ಫೌಂಟನ್ ಪೆನ್ನ್‌ಗಳನ್ನೂ, ಸ್ವಿಸ್ ವಾಚುಗಳನ್ನೂ ಮಾರಾಟ ಮಾಡಲು ತಿಂಗಳಿಗೆ ರೂ ೩೦೦ ರಿಂದ ೭೦೦ ರ ವರೆಗೆ ವೇತನ ಮತ್ತು ಬಕ್ಷಿಸ್ಸೂ ಕವಿಷನಿನಲ್ಲಿ ಏಜಂಟರು ಬೇಕಾಗಿದ್ದಾರೆ. ಮೂದರಿಗಳಿಗೂ ಶರತ್ತುಗಳಿಗೂ ಇಂಗ್ಲಿಷಿನಲ್ಲಿ ಈ ಪತ್ರಕ್ಕೆ ಬರೆಯಿರಿ.

LAWRENCE BROTHERS (K. M)
71. Nagdevi Cross Lane
4–2 Bomday 3

ಬೇಕಾಗಿದ್ದಾರೆ

ಕನ್ನಡ, ಇಂಗ್ಲಿಷ್ ಕಂಪೋಸಿಂಗ್ ಗೊತ್ತಿರುವ ಕಂಪೋಜಿಟರು ಬೇಕಾಗಿದ್ದಾರೆ. ಯೋಗ್ಯತಾನುಸಾರ ವೇತನ ಕೊಡಲಾಗುವದು. ತಾ. ೩೦-೩-೫೭ರೊಳಗೆ ಈ ವಿಳಾಸಕ್ಕೆ ಬರಕೊಳ್ಳುವದು:

ಮೇನೇಜರ್,
'ಕೊಡಗ' ಮಡಿಕೇರಿ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.